ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸ್ಲೊವಾಕಿಯಾ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ ದಿ ಆರ್ಡರ್ ಆಫ್ ದಿ ವೈಟ್ ಡಬಲ್ ಕ್ರಾಸ್ (ಫಸ್ಟ್ ಕ್ಲಾಸ್) ಅನ್ನು ನೀಡಿ ಗೌರವಿಸಲಾಗಿದೆ.


17 ಜೂನ್, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 98 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629





ಮಾವಿನ ಭಂಡಾರ- ಅಜ್ಜಿ ಮನೆ » 2





ಕರ್ತವ್ಯ ಆ್ಯಪ್ ಮೂಲಕ ಹಾಜರಾತಿ ಕಡ್ಡಾಯ » 3





ಒಪ್ಪಂದ ಮುರಿದು ಬಿದ್ದ ಇತಿಹಾಸವಿದೆ : ಇರಾನ್ » 4


# ಪರಿಷತ್ ಚುನಾವಣೆಗೆ ರೆಸಾರ್ಟ್ ತಂತ್ರಗಾರಿಕೆ

## ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ | ಪ್ರತಿಪಕ್ಷ ಶಾಸಕರ ಸೆಳೆಯಲು ಯತ್ನ

• ಪ್ರಜೋದಯ ವರದಿ

**ಬೆಂಗಳೂರು:** ವಿಧಾನಸಭೆಯಿಂದ ವಿಧಾನ ಪರಿಷತ್ತಿನ ಏಳು ಸದಸ್ಯರ ಆಯ್ಕೆಗಾಗಿ ನಡೆ ಯುವ ಚುನಾವಣೆ ಯಲ್ಲಿ ಅಡ್ಡ ಮತದಾನದ ಭೀತಿಯಿಂದಾಗಿ ಕಾಂಗ್ರೆಸ್ ಪಕ್ಷ ಮಂಗಳವಾರ ದಿಂದ ಎರಡು ದಿನಗಳ ಕಾಲ ತಮ್ಮ ಶಾಸಕರಿಗೆ ರೆಸಾರ್ಟ್ ವಾಸ್ತವ್ಯ ಕಡ್ಡಾಯಗೊಳಿಸಿದೆ.

ಜೂ.18ರಂದು ವಿಧಾನಪರಿಷತ್ ಚುನಾವಣೆ ಹಿನ್ನಲೆ ಬಿಡದಿ ಬಳಿಯ ವಂಡರ್‌ಲಾ ರೆಸಾರ್ಟ್‌ನಲ್ಲಿ ಮಂಗಳವಾರ ರಾತ್ರಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಿತು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಸಚಿವರು, ಶಾಸಕರು, ವಿಧಾನಪರಿಷತ್ ಸದಸ್ಯರು ಉಪಸ್ಥಿತರಿದ್ದರು. ಸಭೆಯಲ್ಲಿ ಮಾದರಿ ಮತಪತ್ರ ಪ್ರದರ್ಶಿಸಿ ಮತದಾನ ಮಾಡುವುದು ಹೇಗೆ ಎಂದು ಮಾಹಿತಿ ನೀಡಲಾಯಿತು.

ರೆಸಾರ್ಟ್‌ನಲ್ಲಿ ಶಾಸಕರಿಗಾಗಿ 150 ಕೊಠಡಿಗಳನ್ನು ಕಾಯ್ದಿರಿಸಲಾಗಿದ್ದು, ಎಲ್ಲಾ ಶಾಸಕರೂ ಜೂ.18ರ ವರೆಗೂ ರೆಸಾರ್ಟ್‌ನಲ್ಲೇ ವಾಸ್ತವ್ಯ ಹೂಡಲಿದ್ದು, ಬಳಿಕ ನೇರವಾಗಿ ಮತದಾನದಲ್ಲಿ ಭಾಗವಹಿಸಲಿದ್ದಾರೆ ಎನ್ನಲಾಗಿದೆ.



**ರೆಸಾರ್ಟ್‌ನಲ್ಲಿ ರಣತಂತ್ರ**

ವಿಧಾನಪರಿಷತ್‌ನ 7 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಎಂಟು ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಕಾಂಗ್ರೆಸ್ ತನ್ನ ಸಂಖ್ಯಾ ಬಲವನ್ನು ಮೀರಿ 5ನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಮೊದಲ 4 ಅಭ್ಯರ್ಥಿಗಳಾದ ಬಿ.ಕೆ.ಹರಿಪ್ರಸಾದ್, ತಿಪ್ಪಣ್ಣಪ್ಪ ಕಮಕನೂರು, ಪಿ.ವಿ.ಮೋಹನ್, ಬಿ.ಎಸ್.ಶಿವಣ್ಣ ಮಳವಳ್ಳಿ ಕಣದಲ್ಲಿದ್ದಾರೆ. ಹೆಚ್ಚುವರಿ 5ನೇ ಅಭ್ಯಥಿಯನ್ನಾಗಿ ಡಿ.ಕೆ.ಶಿವಕುಮಾರ್ ಅವರ ಆಪ್ತ ವಿನಯ್ ಕಾರ್ತಿಕ್ ಅವರನ್ನು ಕಣಕ್ಕಿಳಿಸಲಾಗಿದೆ. ಮುಖ್ಯ ಮಂತ್ರಿಯಾದ ಬಳಿಕ ಡಿ.ಕೆ.ಶಿವಕುಮಾರ್ ಅವರಿಗೆ ಮೊದಲ ಚುನಾವಣೆ ಆಗಿರುವುದರಿಂದ ಅಗ್ನಿ ಪರೀಕ್ಷೆ ಎಂದೇ ಭಾವಿಸಲಾಗಿದೆ. ಈ ನಿಟ್ಟಿನಲ್ಲಿ ಬಿಜೆಪಿ ಮತ್ತು ಜೆಡಿಎಸ್ ಶಾಸಕರನ್ನು ಸೆಳೆಯುವ ಪ್ರಯತ್ನಕ್ಕೆ ಡಿ.ಕೆ. ಶಿವಕುಮಾರ್ ಅವರು ಕೈಹಾಕಿದ್ದಾರೆ.

ಕಾಂಗ್ರೆಸ್ 134 ಅಧಿಕೃತ ಸದಸ್ಯರನ್ನು ಹೊಂದಿದೆ. ಪಕ್ಷೇತರರು, ಬಿಜೆಪಿಯ ಉಚ್ಚಾಟಿತರು ಹಾಗು ಪ್ರತಿ ಪಕ್ಷಗಳ ಭಿನ್ನಮತಿಯ ಶಾಸಕರ ಬೆಂಬಲ ಪಡೆಯಲು ಪ್ರಯತ್ನಿಸಲಾಗುತ್ತಿದೆ.

ಮತ್ತೊಂದೆಡೆ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ತಮ್ಮ ಪಕ್ಷದ ಶಾಸಕರ ಮತಗಳನ್ನು ಕಾಪಾಡಿ ಕೊಳ್ಳಲು ಹಾಗು ಕಾಂಗ್ರೆಸ್‌ನಲ್ಲಿ ಅಸಮಾಧಾನಿತರನ್ನು ಸೆಳೆದು, ಜೆಡಿಎಸ್ ಅಭ್ಯರ್ಥಿ ಗೋವಿಂದರಾಜ್ ಅವರನ್ನು ಗೆಲ್ಲಿಸಿಕೊಳ್ಳಲು ತೆರೆಮರೆಯಲ್ಲಿ ಪ್ರಯತ್ನಿಸುತ್ತಿದೆ. ಕಾಂಗ್ರೆಸ್ ತನ್ನ ಮೊದಲ ಸಾಲಿನ ನಾಲ್ವರು ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವ ಮೂಲಕ ಬಾಕಿ ಉಳಿದ ಮತಗಳ ಜೊತೆಗೆ ಎರಡನೇ ಪ್ರಾಶಸ್ತ್ಯ ಮತಗಳೊಂದಿಗೆ 5ನೇ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ.

» ನಾಲ್ಕನೇ ಪುಟದಲ್ಲಿ


### ಪಕ್ಷಗಳ ಬಲಾಬಲ ಲೆಕ್ಕಾಚಾರ

ಪಕ್ಷಗಳ ಬಲಾಬಲದ ಲೆಕ್ಕಾಚಾರದಲ್ಲಿ ಕಾಂಗ್ರೆಸ್‌ನ ಐದನೇ ಅಭ್ಯರ್ಥಿಗೆ ಮೂರು ಮತಗಳ ಕೊರತೆಯಾಗಿದೆ. ನಾಲ್ಕು ಸ್ಥಾನಗಳನ್ನು ಸುಲಭವಾಗಿ ಗೆಲ್ಲುವ ಅವಕಾಶ ಇದ್ದರೂ, ಐದನೇ ಅಭ್ಯರ್ಥಿ ಗೆಲುವಿಗೆ 29 ಮತಗಳ ಅಗತ್ಯವಿದೆ. ಪಕ್ಷದ ನಾಲ್ಕು ಅಭ್ಯರ್ಥಿಗಳಿಗೆ ಮತ ಚಲಾಯಿ ಸಿದರೆ ಐದನೇ ಅಭ್ಯರ್ಥಿಗೆ ಮತಗಳ ಕೊರತೆ ಎದುರಾಗುತ್ತಿದೆ. ಸದ್ಯ ಐದನೇ ಅಭ್ಯರ್ಥಿ ಬಳಿ 26 ಮತಗಳು ಮಾತ್ರ ಉಳಿಯುತ್ತಿವೆ. ಉಳಿದ ಮೂರು ಮತಗಳಿಗೆ ಬಿಜೆಪಿ, ಜೆಡಿಎಸ್ ಶಾಸಕರತ್ತ ಡಿಕೆಶಿ ಚಿತ್ತ ಹರಿಸಿದ್ದಾರೆ.

ಬಿಜೆಪಿ ಉಚ್ಚಾಟಿತ ಶಾಸಕ ಎಸ್.ಟಿ.ಸೋಮಶೇಖರ್, ಶಿವರಾಂ ಹೆಬ್ಬಾರ್ ಹಾಗು ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಸೆಳೆಯುವ ಲೆಕ್ಕಾಚಾರ ನಡೆಯುತ್ತಿದೆ. ಒಂದು ವೇಳೆ ಯತ್ನಾಳ್ ಒಪ್ಪದಿದ್ದರೆ ಜೆಡಿಎಸ್‌ನ ಜಿ.ಟಿ.ದೇವೇಗೌಡ ಸೇರಿ ಕೆಲವರನ್ನು ಸೆಳೆಯುವ ಲೆಕ್ಕಾಚಾರದಲ್ಲಿ ಇದ್ದಾರೆ.

# ಕ್ಯಾತೆ ಬಿಟ್ಟು ಖಾತೆ ವಹಿಸಿಕೊಂಡ ಕೃಷ್ಣಬೈರೇಗೌಡ

• ಪ್ರಜೋದಯ ವರದಿ



**ಬೆಂಗಳೂರು:** ಖಾತೆ ವಿಚಾರವಾಗಿ ಕ್ಯಾತೆ ತೆಗೆದಿದ್ದ ಸಚಿವ ಕೃಷ್ಣಬೈರೇಗೌಡ ಅವರು ಕೊನೆಗೂ ತಮ್ಮ ನಿರ್ಧಾರ ಬದಲಿಸಿ ಮಂಗಳವಾರ ಇಲಾಖಾ ಅಧಿಕಾರಿಗಳ ಸಭೆ ನಡೆಸುವ ಮೂಲಕ ವಿವಾದಕ್ಕೆ ತೆರೆ ಎಳೆದಿದ್ದಾರೆ.

ಬಿಡಿಎ ಹಾಗು ಬಿಎಂಆರ್‌ಡಿಯ ಪ್ರಾಧಿಕಾರ ಹೊರತುಪಡಿಸಿದ ಬೆಂಗಳೂರು ಅಭಿವೃದ್ಧಿ ಖಾತೆ ಬೇಡವೆಂದಿದ್ದ ಕೃಷ್ಣಬೈರೇಗೌಡ ಅವರು ಅಧಿಕಾರ ಸ್ವೀಕಾರದಿಂದ ಹಿಂದೆ ಸರಿದಿದ್ದರು. ಇದೀಗ ಕೊನೆಗೂ ಮಾತುಕತೆ ಫಲ ನೀಡಿದ್ದು, ಬೆಂಗಳೂರು ಅಭಿ ವೃದ್ಧಿ ಇಲಾಖೆ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ನಮ್ಮ ಮೆಟ್ರೋ, ಬಿಡಬ್ಲ್ಯೂಎಸ್‌ಎಸ್ ಅಧಿಕಾರಿಗಳ ಜೊತೆಗೂ ಅವರು ಸಭೆ ನಡೆಸಿದ್ದಾರೆ.

**ದೆಹಲಿ ಮಟ್ಟದಲ್ಲಿ ಮಾತುಕತೆ**

ಖಾತೆ ವಿಚಾರವಾಗಿ ಅಸಮಾಧಾನ ಗೊಂಡಿದ್ದ ಕೃಷ್ಣಬೈರೇಗೌಡ ಅವರು ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿದ್ದರು. ಎರಡು ಪ್ರಾಧಿಕಾರವನ್ನು ನೀಡದೆ ಇರುವುದರಿಂದ ಯಾವ ರೀತಿಯಲ್ಲಿ ಸಮಸ್ಯೆ ಆಗಲಿದೆ ಎಂಬ ಕುರಿತಾಗಿ ವಿವರ ನೀಡಿದ್ದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಜೊತೆಗೂ ದೆಹಲಿಯಲ್ಲಿ ಮಾತುಕತೆ ನಡೆಸಿದ್ದರು. ಹಾಗಿದ್ದರೂ ಗೊಂದಲ ಬಗೆಹರಿದಿಲ್ಲ. ಇದೀಗ ಕೊನೆಗೂ ಆಂತರಿಕವಾಗಿ ನಡೆದ ಮಾತುಕತೆ ಯಶಸ್ವಿಯಾ ದಂತಿದೆ.

ಸಿದ್ದರಾಮಯ್ಯ ಸಂಪುಟದಲ್ಲಿ ಕೃಷ್ಣ ಬೈರೇಗೌಡ ಅವರು ಕಂದಾಯ ಸಚಿವ ರಾಗಿದ್ದರು. ಕಂದಾಯ ಇಲಾಖೆಯನ್ನು ಸಮರ್ಥವಾಗಿ ನಿಭಾಯಿಸಿದ್ದಾರೆಂಬ ಖ್ಯಾತಿಗೆ ಒಳಗಾಗಿದ್ದರು. ಹಲವು ಗಮನಾರ್ಹ ಬದಲಾವಣೆಗಳನ್ನು ಅವರು ಕಂದಾಯ ಇಲಾಖೆ ಯಲ್ಲಿ ತಂದಿದ್ದರು.

ಬೆಂಗಳೂರು ಅಭಿವೃದ್ಧಿ ಇಲಾಖೆ ಯಲ್ಲಿ ಕೃಷ್ಣ ಬೈರೇಗೌಡ ಅವರ ಮೇಲೆ ಸಾಕಷ್ಟು ನಿರೀಕ್ಷೆಗಳು ಇವೆ. ಬೆಂಗಳೂರಿನಲ್ಲಿ ಸಾಕಷ್ಟು ಸಮಸ್ಯೆಗಳು ನಿತ್ಯ ಕಾಣಿಸಿಕೊಳ್ಳುತ್ತಿವೆ. ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಬೆಂಗಳೂರಿನ ಟ್ರಾಫಿಕ್ ಸಮಸ್ಯೆ ಬಿಗ ಡಾಯಿಸುತ್ತಲೇ ಇವೆ. ಇದಕ್ಕೆ ಪರಿಹಾರ ಕಲ್ಪಿಸಬೇಕಾಗಿದೆ.

ನಮ್ಮ ಮೆಟ್ರೋ ವಿಸ್ತರಣೆ, ಬೆಂಗಳೂರಿನಲ್ಲಿ ಸುರಂಗ ಮಾರ್ಗ, ನಗರದ ರಸ್ತೆಗಳ ಅಭಿವೃದ್ಧಿ ಸೇರಿ ಹಲವು ಸವಾಲುಗಳು ಕೃಷ್ಣ ಬೈರೇಗೌಡ ಅವರ ಮುಂದಿದೆ. ಈಗಾ ಗಲೇ ಮಳೆಗಾಲ ಆರಂಭಗೊಂಡಿದ್ದು, ಮಳೆ ನೀರಿನಿಂದ ಸಾಕಷ್ಟು ಅವಾಂತರ ಗಳು ಸಂಭವಿಸುತ್ತಿವೆ. ಈ ನಿಟ್ಟಿನಲ್ಲಿ ಕೃಷ್ಣ ಬೈರೇಗೌಡ ಬೆಂಗಳೂರು ಅಭಿವೃದ್ಧಿ ಇಲಾಖೆಯನ್ನು ಯಾವ ರೀತಿಯಲ್ಲಿ ನಿಬಾಯಿಸುತ್ತಾರೆಂಬ ಕುತೂಹಲ ಹೆಚ್ಚಿದೆ.

# ಶಿವಲಿಂಗೇಗೌಡ ವಿರುದ್ಧ ಭಿತ್ತಿಪತ್ರ: ಪೊಲೀಸರಿಗೆ ದೂರು

• ಪ್ರಜೋದಯ ವರದಿ

**ಅರಸೀಕೆರೆ:** ಅಖಿಲ ಭಾರತ ವೀರಶೈವ ಮಹಾಸಭಾ ಹೆಸರಿನಲ್ಲಿ ಭಿತ್ತಿ ಪತ್ರಗಳನ್ನು ಹಂಚಿ ತಮ್ಮ ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ. ಭಿತ್ತಿ ಪತ್ರ ಹಂಚಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಕೆ.ಎಂ.ಶಿವಲಿಂಗೇಗೌಡ ಅವರು ವೀರಶೈವ ಸಮಾಜದ ಬಗ್ಗೆ ನಿಂದನೆ ಹಾಗು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ವೀರಶೈವ ಸಮಾಜವನ್ನು ಕೆಟ್ಟ ದೃಷ್ಟಿಯಲ್ಲಿ ನೋಡುತ್ತಿದ್ದಾರೆ. ಉಪಜಾತಿಗಳ ಹೆಸರಿನಲ್ಲಿ ವೀರಶೈವ ಸಮಾಜವನ್ನು ಒಡೆದಿದ್ದಾರೆಂದು ಅಖಿಲ ಭಾರತ ವೀರಶೈವ ಮಹಾಸಭಾ ಅರಸೀಕೆರೆ ಘಟಕ ಹೆಸರಿನಲ್ಲಿ ಭಿತ್ತಿಪತ್ರಗಳನ್ನು ಮುದ್ರಣ ಮಾಡಿ ಮನೆ ಮನೆಗೆ ಹಂಚಿಕೆ ಮಾಡಲಾಗಿದೆ.



ಶಿವಲಿಂಗೇಗೌಡ ಅವರು ಶಾಸಕರಾಗಿ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ ಸಂಪಾದನೆ ಮಾಡಿ ಬೆಂಗಳೂರಿನಲ್ಲಿ ಬೃಹತ್ ಮನೆ ನಿರ್ಮಿಸಿಕೊಂಡಿದ್ದಾರೆ. ಈ ಹಿಂದಿನ ಲಿಂಗಾಯಿತ ಸಮಾಜಕ್ಕೆ ಸೇರಿದ ಶಾಸಕರುಗಳೆಲ್ಲಾ ಏನೂ ಕೆಲಸವನ್ನೇ ಮಾಡಿಲ್ಲ. ಹೊಟ್ಟೆಪಾಡಿನ ಶಾಸಕರು ಎಂದಿದ್ದರೆಂದು ಬಿತ್ತಿ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಎನ್.ಆರ್.ಸಂತೋಷ್ ಅವರು ಮುಂದಿನ ಬಾರಿ ಕ್ಷೇತ್ರದ ಶಾಸಕರಾಗುತ್ತಾರೆಂದು ಅವರ ಮೇಲೆ ಹಲ್ಲೆಗೆ ಮಾಡುವ ಮಟ್ಟಕ್ಕೆ ಶಿವಲಿಂಗೇಗೌಡರ ಸಂಬಂಧಿಕರು ಹೋಗಿದ್ದಾರೆ. ಸಣ್ಣಪುಟ್ಟ ಸಮಾಜದವರು ಅರಸೀಕೆರೆಯಲ್ಲಿ ರಾಜಕಾರಣ ಮಾಡುವ ಹಾಗೆಯೇ ಇಲ್ಲವೇ. ಬಸವಣ್ಣನವರ ಅನುಯಾಯಿಗಳು ಈಗಲೂ ಒಂದಾಗದಿದ್ದರೆ ನಮ್ಮನ್ನು ಮುಗಿಸಿಬಿಡುತ್ತಾರೆ. 2028ಕ್ಕೆ ಅರಸೀಕೆರೆ ಅನುಭವ ಮಂಟಪವಾಗಲೇಬೇಕು. ಶಿವಲಿಂಗೇಗೌಡರ ಸೊಕ್ಕಡಗಿಸಲೇ ಬೇಕೆಂಬ ಬಿತ್ತಿಪತ್ರವನ್ನು ಹಂಚಲಾಗಿದೆ.

ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಪೊಲೀಸ್ ಠಾಣೆಗೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ದೂರು ನೀಡಿದ್ದು, ಅರಸೀಕೆರೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬಿಡದಿ ಟೌನ್‌ಶಿಪ್‌ಗೆ ಮಾಜಿ ಸಚಿವ ರೇವಣ್ಣ ವಿರೋಧ

• ಪ್ರಜೋದಯ ವರದಿ

**ಹಾಸನ:** ಫಲವತ್ತಾದ ಭೂಮಿ ದುರುಪಯೋಗ ಆಗಬಾರದೆಂಬ ಕಾರಣಕ್ಕೆ ಬಿಡದಿ ಟೌನ್‌ಶಿಪ್ ಯೋಜನೆಗೆ ವಿರೋಧಿಸುತ್ತಿದ್ದೇವೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಹೇಳಿದರು.

ನಗರದ ತಾಲ್ಲೂಕು ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಜನೆ ವಿರೋಧಿಸಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಸ್ಥಳೀಯ ನಾಯಕರೊಂದಿಗೆ ಹೋರಾಟ ಮಾಡುತ್ತಿದ್ದಾರೆ. ಕುಮಾರಸ್ವಾಮಿ ಆ ಜಿಲ್ಲೆಯಲ್ಲಿ ಮೂವತ್ತು ವರ್ಷಗಳ ಕಾಲ ಶಾಸಕರಾಗಿ, ಲೋಕಸಭಾ ಸದಸ್ಯರಾಗಿದ್ದಾರೆ. ಅಲ್ಲಿಯ ಪರಿಸ್ಥಿತಿ ಏನೆಂಬುದು ಗೊತ್ತಿದೆ, ನನಗೇನು ಗೊತ್ತಿಲ್ಲ. ಅಲ್ಲಿ ಏನೇನಿದೆ, ಬೆಳೆ ಎಷ್ಟಿದೆ ಎಂದು ಅವರಿಗೆ ಗೊತ್ತಿದೆ.



ಫಲವತ್ತಾದ ಭೂಮಿ ಸ್ವಾಧೀನ ಪಡಿಸಿಕೊಂಡು ಟೌನ್ ಶಿಪ್ ಮಾಡುವುದು ಸೂಕ್ತವಲ್ಲ ಎಂದರು.

ಜೆಡಿಎಸ್‌ನಿಂದ ಹಮ್ಮಿಕೊಂಡಿರುವ ಪಾದಯಾತ್ರೆಯಲ್ಲಿ ಭಾಗವಹಿಸುವ ಕುರಿತು ಪ್ರತಿಕ್ರಿಯಿಸಿದ ಅವರು, ಪಕ್ಷ ಏನು ಹೇಳುತ್ತೋ ಅದನ್ನು ಮಾಡುತ್ತೇವೆ. ಅಲ್ಲಿ ಏನು ನಡೆಯುತ್ತಿದೆ ಎಂಬುದು ನನಗೆ ಗೊತ್ತಿಲ್ಲ. ನಾನು ನಮ್ಮ ಜಿಲ್ಲೆಯಲ್ಲಿ ರೈತರಿಗೆ ತೊಂದರೆ ಆಗುತ್ತಿರುವುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ ಅಷ್ಟೇ ಎಂದರು.

ಪ್ರಧಾನಿ ನರೇಂದ್ರ ಮೋದಿಯವರೇ ಟೌನ್ ಶಿಪ್‌ಗೆ ಒಪ್ಪಿದ್ದಾರೆಂಬ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆಗೆ ವ್ಯಂಗ್ಯವಾಡಿದ ರೇವಣ್ಣ ಅವರು, ಅದು ನನಗೆ ಗೊತ್ತಿಲ್ಲ, ನಾವು ಮೋದಿ ಅವರ ಹತ್ತಿರ ಇನ್ನೂ ಹೋಗಿಲ್ಲ. ಹೋದಾಗ ಬೇಕಾದರೆ ತಿಳಿದುಕೊಂಡು ಬಂದು ಹೇಳುತ್ತೇನೆ ಎಂದರು.

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಆಸ್ತಿ ದಾಖಲೆ ಬಹಿರಂಗಪಡಿಸುವುದಾಗಿ ಮಾಜಿ ಸಚಿವರೊಬ್ಬರು ಹೇಳಿದ್ದಾರೆ. ನಮ್ಮ ಕುಟುಂಬದವರ ಎಲ್ಲರ ಆಸ್ತಿ ವಿವರ ಸರ್ಕಾರದ ಬಳಿ ಇದೆ. ಅದನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಲಿ ಎಂದು ಸವಾಲೆಸೆದರು.

ಜಿಲ್ಲೆಯಲ್ಲಿ ಎರಡೂವರೆ ಸಾವಿರಕ್ಕೂ ಅಧಿಕ ಕಂದಾಯ ಇಲಾಖೆ ಕಡತಗಳು ಜಿಲ್ಲಾಧಿಕಾರಿ ಸಹಿಗಾಗಿ ಬಾಕಿ ಉಳಿದಿವೆ. ಗೋಮಾಳ ಜಾಗವನ್ನು ಬೇಕಾಬಿಟ್ಟಿ ಖಾತೆ ಮಾಡಿ ಕೊಡಲಾಗುತ್ತಿದೆ. ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಹೇಳುವವರು ಕೇಳುವವರು ಯಾರೂ ಇಲ್ಲದೆ ಜಿಲ್ಲೆ ತಬ್ಬಲಿಯಾಗುತ್ತಿದೆ ಎಂದು ದೂರಿದರು.

ಕಳೆದ ಮೂರು ವರ್ಷಗಳಲ್ಲಿ ಎರಡು ಬಾರಿ ಮುಖ್ಯಮಂತ್ರಿ ಜಿಲ್ಲೆಗೆ ಭೇಟಿ ನೀಡಿ ಕ್ರಾಂತಿಕಾರಿ ಬದಲಾವಣೆ ಆಗಿದೆ ಎಂದಿದ್ದರು. ಎಲ್ಲಿ ಕ್ರಾಂತಿ ಆಗಿದೆ ಎಂಬುದನ್ನು ಬಹಿರಂಗಪಡಿಸಬೇಕು ಎಂದರು.

**ಮುಖ್ಯಮಂತ್ರಿ ಬರಬೇಕೇ**

ರೈತರಿಗೆ ರಸಗೊಬ್ಬರ ಕೊಡಿಸಲು ಸಚಿವರು, ಮುಖ್ಯಮಂತ್ರಿ ಬರುವುದಾದರೆ ಜಿಲ್ಲಾಡಳಿಯ ಏಕೆ ಇರಬೇಕು. ನಾನು ಮಂತ್ರಿಯಾಗಿದ್ದಾಗ ಆರು ತಿಂಗಳ ಮೊದಲೇ ರಸಗೊಬ್ಬರ ದಾಸ್ತಾನು ಇರಿಸುತ್ತಿದ್ದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದಲೇ ಶೇ.80ರಷ್ಟು ಗೊಬ್ಬರ ವಿತರಣೆಯಾಗಬೇಕು. ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳ ಸಭೆ ನಡೆಸುವುದಿಲ್ಲ. ಮಧ್ಯವರ್ತಿಗಳು ರೈತರಿಂದ ಬೇಕಾಬಿಟ್ಟಿ ಹಣ ವಸೂಲಿ ಮಾಡುತ್ತಿದ್ದಾರೆಂದು ಆರೋಪಿಸಿದರು.

# ಪೌರಕಾರ್ಮಿಕರ ಯೋಗಕ್ಷೇಮಕ್ಕೆ ವಿಶೇಷ ಆದ್ಯತೆ

## ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುರುಳಿ ಅಶೋಕ್ ಸಾಲಪ್ಪ

• ಪ್ರಜೋದಯ ವರದಿ

**ಹಾಸನ:** ಪೌರಕಾರ್ಮಿಕರ ಆರೋಗ್ಯ ರಕ್ಷಣೆಯೇ ಸರ್ಕಾರದ ಮೊದಲ ಆದ್ಯತೆಯಾಗಿದೆ. ವಸತಿ ಸೌಲಭ್ಯ ಹಾಗು ಖಾಯಂ ನೇಮಕಾತಿ ಸೇರಿ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುವುದೆಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುರುಳಿ ಅಶೋಕ್ ಸಾಲಪ್ಪ ಅವರು ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ನೇರ ಪಾವತಿ ಪೌರ ಕಾರ್ಮಿಕರ ಆರೋಗ್ಯ ತಪಾಸಣಾ ಶಿಬಿರ, ಅರಿವು ಮೂಡಿಸುವ ಕಾರ್ಯಕ್ರಮ ಹಾಗು ಆರೋಗ್ಯ ಕಾರ್ಡ್ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು, ಜನರ ಆರೋಗ್ಯ ಮತ್ತು ನಗರದ ಸ್ವಚ್ಛತೆಯನ್ನು ಕಾಪಾಡಲು ತಮ್ಮ ಆರೋಗ್ಯವನ್ನೇ ಪಣಕ್ಕಿಡುವ ಪೌರ ಕಾರ್ಮಿಕರ ಯೋಗ ಕ್ಷೇಮಕ್ಕೆ ರಾಜ್ಯ ಸರ್ಕಾರ ವಿಶೇಷ ಆದ್ಯತೆ ನೀಡಿದೆ ಎಂದು ಹೇಳಿದರು.



ಪೌರ ಕಾರ್ಮಿಕರಿಗೆ ಆರೋಗ್ಯ ಸಮಸ್ಯೆ ಎದುರಾದಾಗ ತ್ವರಿತ ಮತ್ತು ಗುಣಮಟ್ಟದ ಚಿಕಿತ್ಸೆ ದೊರೆಯುವಂತೆ ಆರೋಗ್ಯ ವಿಮೆ ಆಧಾರಿತ ಹೆಲ್ತ್ ಕಾರ್ಡ್‌ಗಳನ್ನು ವಿತರಿಸಲಾಗುತ್ತಿದೆ. ಪ್ರತಿಯೊಬ್ಬ ಪೌರಕಾರ್ಮಿಕರೂ ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಹಿಂದೆ ಈ ಸಮುದಾಯದವರನ್ನು ತುಚ್ಛವಾಗಿ ಕಾಣಲಾಗುತ್ತಿತ್ತು. ಆದರೆ, ಸಾಲಪ್ಪ ವರದಿ ಜಾರಿಯಾದ ನಂತರ ಪೌರ ಕಾರ್ಮಿಕವೆಂಬ ಗೌರವಯುತ ಗುರುತಿನೊಂದಿಗೆ ಸಮಾಜದಲ್ಲಿ ಮಾನ್ಯತೆ ದೊರೆತಿದೆ. ಪ್ರತಿಯೊಬ್ಬರೂ

» ನಾಲ್ಕನೇ ಪುಟದಲ್ಲಿ

### ಪರ್ಯಾಯ ಉದ್ಯೋಗಕ್ಕೆ ಒತ್ತು

ಪೌರ ಕಾರ್ಮಿಕರು ಪರ್ಯಾಯ ಉದ್ಯೋಗ ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳಲು ಕೌಶಲ್ಯಾಭಿವೃದ್ಧಿ ತರಬೇತಿ, ಸ್ವಯಂ ಉದ್ಯೋಗ ಹಾಗು ಜೀವನೋಪಾಯ ವೃದ್ಧಿ ಯೋಜನೆಗಳಿಗೆ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಿದೆ. ಪ್ರತಿಯೊಬ್ಬ ಪೌರಕಾರ್ಮಿಕರಿಗೂ ಸ್ವಂತ ಮನೆ ಹಾಗು ಸಮಗ್ರ ಆರೋಗ್ಯ ವಿಮೆ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅಶೋಕ್ ಸಾಲಪ್ಪ ಅವರು ತಿಳಿಸಿದರು.

# ಹಿಮ್ಸ್‌ಗೆ ಹೆಚ್.ಪಿ.ಸ್ವರೂಪ್ ಭೇಟಿ, ಪರಿಶೀಲನೆ

• ಪ್ರಜೋದಯ ವರದಿ

ಹಾಸನ : ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಂಗಳವಾರ ಭೇಟಿ ನೀಡಿ ವ್ಯವಸ್ಥೆ ಪರಿಶೀಲಿಸಿದರು.

ರೋಗಿಗಳಿಗೆ ನೀಡಲಾಗುವ ಊಟ, ಹಾಸಿಗೆ ವ್ಯವಸ್ಥೆ, ಔಷಧೋಪಚಾರ ಕುರಿತು ವಾರ್ಡ್ ಗಳಿಗೆ ಭೇಟಿ ನೀಡಿ ಆಸ್ಪತ್ರೆಯಲ್ಲಿ ವೈದ್ಯರ ಸೇವೆ ಹಾಗು ನೌಕರರು ಹೇಗೆ ಕೆಲಸ ಮಾಡುತ್ತಿದ್ದಾರೆಂದು ಸಾರ್ವಜನಿಕರ ಮೂಲಕ ಮಾಹಿತಿ ಪಡೆದ ನಂತರ ಕಚೇರಿಯಲ್ಲಿ ವೈದ್ಯಾಧಿಕಾರಿಗಳ ಸಭೆ ನಡೆಸಿ ಮೂಲಸೌಕರ್ಯಗಳ ಕೊರತೆ ಕುರಿತು ಮಾತುಕತೆ ನಡೆಸಿದರು.

ಈ ವೇಳೆ ಮಾತನಾಡಿದ ಶಾಸಕರು, ಮಳೆಗಾಲ ಆರಂಭವಾಗುತ್ತಿದ್ದು, ಶೀತ, ಜ್ವರ ಸೇರಿ ಅನೇಕ ರೀತಿಯ ರೋಗ-ರುಜಿನ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಹಾಗಾಗಿ ರೋಗಿಗಳಿಗೆ ಸಮಸ್ಯೆ ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಆರೋಗ್ಯ ರಕ್ಷಣೆಗೆ ಏನೆಲ್ಲಾ ಅಗತ್ಯಗಳಿವೆಯೋ ಅವೆಲ್ಲವನ್ನು ಪೂರೈಸುವ ನಿಟ್ಟಿನಲ್ಲಿ ಇಲಾಖೆ, ಅಧಿಕಾರಿಗಳು ಹಾಗು ವೈದ್ಯರು ಕೆಲಸ ಮಾಡಬೇಕೆಂದು ಸಲಹೆ ನೀಡಿದರು.



ಸರ್ಕಾರಿ ಆಸ್ಪತ್ರೆಗೆ ಹೆಚ್ಚಿನ ಪ್ರಮಾಣದಲ್ಲಿ ಬಡವರು ಬರುತ್ತಾರೆ. ಅವರಿಗೆ ಸಮಸ್ಯೆಯಾಗಬಾರದು. ಬೇಕಾದ ಚಿಕಿತ್ಸೆ ನೀಡಿ ರೋಗ ರುಜಿನ ವಾಸಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ಹೇಳಿದರು. ಹಿಮ್ಸ್ ನಿರ್ದೇಶಕ ಡಾ|| ರಾಜಣ್ಣ, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ|| ರಾಘವೇಂದ್ರ ಪ್ರಸಾದ್ ಇತರರಿದ್ದರು.

# ರೈಲಿಗೆ ಸಿಲುಕಿ ಮಹಿಳೆ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ :** ರೈಲ್ವೆ ಹಳಿ ಪಕ್ಕ ಹೋಗುತ್ತಿದ್ದಾಗ ಚಲಿಸುವ ರೈಲು ತಾಗಿದ್ದರಿಂದ ಮಹಿಳೆ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹಿರೀಸಾವೆಯಲ್ಲಿ ನಡೆದಿದೆ.



ತಾಲ್ಲೂಕಿನ ಬೂಕ ಗ್ರಾಮದ ರಾಜಮ್ಮ (48) ಮೃತರು. ಸೋಮವಾರ ಸಂಜೆ ಹಿರೀಸಾವೆಯಿಂದ ತರಕಾರಿ ತೆಗೆದುಕೊಂಡು ಮನೆಗೆ ಹೋಗುತ್ತಿದ್ದರು. ರೈಲ್ವೆ ಮಾರ್ಗದ ಪಕ್ಕದಲ್ಲಿಯೇ ಮನೆ ಇದ್ದು, ಮಾರ್ಗದಲ್ಲಿ ನಡೆದುಕೊಂಡು ಹೋಗುತ್ತಿದ್ದ ವೇಳೆ ಹಾಸನದಿಂದ ಬೆಂಗಳೂರಿಗೆ ತೆರಳುತ್ತಿದ್ದ ಮೆಮ್ ರೈಲ್ ಹಿಂದಿನಿಂದ ತಾಗಿದೆ. ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ರಾಜಮ್ಮ ಮೃತಪಟ್ಟಿದ್ದಾರೆ. ಬೆಳ್ಳೂರು ಕ್ರಾಸ್‌ನಲ್ಲಿರುವ ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಮೃತದೇಹ ಹಸ್ತಾಂತರಿಸಲಾಯಿತು. ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

## ಕಳ್ಳಾಟಕ್ಕೆ ತೆರೆ ಎಳೆದ ಶಿಕ್ಷಣ ಇಲಾಖೆ | ಮಕ್ಕಳ ಹಾಜರಾತಿಗೂ ನಿರಂತರ ಆ್ಯಪ್

# ಶಿಕ್ಷಕರ ಹಾಜರಾತಿಗೆ ಕರ್ತವ್ಯ-ಕಾಮ್ಸ್ ಅನುಷ್ಠಾನ


-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ :** ಶಿಕ್ಷಣ ಕ್ಷೇತ್ರದಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಶಿಕ್ಷಕರ ಹಾಜರಾತಿ ಕಳವಿಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ಕರ್ತವ್ಯ-ಕಾಮ್ಸ್ ಎಂಬ ಆ್ಯಪ್ ಮೂಲಕ ಹಾಜರಾತಿ ಹಾಕಲು ಆನ್‌ಲೈನ್ ವ್ಯವಸ್ಥೆಯ ತಾಂತ್ರಿಕ ತೊಂದರೆಯಿಂದ ಶಿಕ್ಷಕರು ಹೈರಾಣಾಗಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯು ಶಿಕ್ಷಕರು ಮತ್ತು ಸಿಬ್ಬಂದಿ ಹಾಜರಾತಿಯಲ್ಲಿ ಶಿಸ್ತು ಹಾಗು ಪಾರದರ್ಶಕತೆ ಕಾಯ್ದುಕೊಳ್ಳಲು ಆನ್‌ಲೈನ್ ವ್ಯವಸ್ಥೆ ಜಾರಿಗೊಳಿಸಿದೆ. ಒಂದೆಡೆ ಈ ವ್ಯವಸ್ಥೆ ಕಳ್ಳಾಟ ಮಾಡುವ ಶಿಕ್ಷಕರಿಗೆ ಪಾಠ ಕಲಿಸಲು ಸಹಕಾರಿಯಾಗಿದೆ. ಸಾಕಷ್ಟು ಕಡೆಗಳಲ್ಲಿ ನೆಟ್‌ವರ್ಕ್ ಸಮಸ್ಯೆಯಿಂದಾಗಿ ಪ್ರಾಮಾಣಿಕವಾಗಿ ಶಾಲೆಗೆ ತೆರಳಿ ಬೋಧನೆ ಮಾಡುವವರಿಗೆ ಸಮಸ್ಯೆಯಾಗಿ ಪರಿಣಮಿಸಿದೆ.

ಕೆಲವು ಕುಗ್ರಾಮಗಳಲ್ಲಿನ ಶಾಲೆಗಳಿಗೆ ತೆರಳದೆ ವೇತನ ಪಡೆಯುತ್ತಿದ್ದ ಹಾಗು ಮುಖ್ಯ ಶಿಕ್ಷಕರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಎರಡು ದಿನಕ್ಕೊಮ್ಮೆ ತೆರಳುತ್ತಿದ್ದಂತಹ ಶಿಕ್ಷಕರಿಗೆ ಈ ಕಾಮ್ಸ್ ಹಾಜರಾತಿ ವ್ಯವಸ್ಥೆ ಕಟ್ಟಿಹಾಕಿದಂತೆ ಮಾಡಿದೆ. ಇದೀಗ ನಿಗದಿತ ಸಮಯಕ್ಕೆ ಶಾಲೆ ಆವರಣಕ್ಕೆ ತೆರಳಬೇಕು. ಕಾಮ್ಸ್ ಮೊಬೈಲ್ ಆ್ಯಪ್‌ನಲ್ಲಿ ಜಿಪಿಎಸ್ ವ್ಯವಸ್ಥೆ ಇದ್ದು, ಸ್ಥಳ ಗುರುತಿಸಲಿದೆ. ಅಲ್ಲದೇ ಸಂಬಂಧಿಸಿದ ಶಿಕ್ಷಕರ ಮುಖಚಹರೆಯನ್ನು ಗುರುತಿಸಿಕೊಳ್ಳುತ್ತದೆ. ಅವೆರಡೂ ತಾಳೆಯಾದರೆ ಮಾತ್ರ ಹಾಜರಾತಿ ತೆಗೆದುಕೊಳ್ಳುತ್ತದೆ. ಇಲ್ಲವಾದರೆ ಗೈರುಹಾಜರು ದಾಖಲಾಗುತ್ತದೆ.



ಬೆಳಿಗ್ಗೆ 10 ಗಂಟೆಯ ಒಳಗೆ ಶಿಕ್ಷಕರು ಶಾಲಾ ಆವರಣದಲ್ಲೇ ಇದ್ದು ಆ್ಯಪ್‌ನ ಕ್ಯಾಮರಾ ಆನ್ ಮಾಡಿಕೊಂಡು ಅಪ್ಲೋಡ್ ಮಾಡಬೇಕು. ಸಂಜೆ 5 ಗಂಟೆ ಬಳಿಕ ಪುನಃ ಅದೇ ಪ್ರಕ್ರಿಯೆ ಮೂಲಕ ಲಾಗ್ ಔಟ್ ಆಗಬೇಕು. ಒಂದು ವೇಳೆ ಶಿಕ್ಷಕರು ಶಾಲಾ ಪರಿಧಿಯಿಂದ ದೂರವಿದ್ದರೆ ಹಾಜರಾತಿ ದಾಖಲಾಗುವುದಿಲ್ಲ. ಸತತ ನಾಲ್ಕು ಬಾರಿ ಅಪ್ಲೋಡ್‌ನಲ್ಲಿ ವ್ಯತ್ಯಾಸವಾದರೆ ಒಂದು ದಿನದ ರಜೆ ಕಡಿತ ಮಾಡಲಾಗುತ್ತದೆ. ಹೀಗಾಗಿ ಶಿಕ್ಷಕರು ಕಳ್ಳಾಟ ಬಿಟ್ಟು ಶಾಲೆಗೆ ಹೋಗುವಂತಾಗಿದೆ.

ಬೆಳಿಗ್ಗೆ ಶಾಲಾ ಸಮಯದಿಂದ ಶಾಲೆ ಮುಕ್ತಾ ಯದ ಅವಧಿಯವರೆಗೆ ಜಿಪಿಎಸ್ ಆನ್ ಮೋಡ್‌ನಲ್ಲೇ ಇರುತ್ತದೆ. ಶಿಕ್ಷಕರು ಹಾಜ ರಾತಿ ಹಾಕಿ ಬಳಿಕ ಎಲ್ಲಿಗೆ ಬೇಕಾದರೂ ಹೋಗುವಂತಿಲ್ಲ. ಒಂದು ವೇಳೆ ಶಾಲೆಯ ಕೆಲಸದ ಮೇಲೆ ಹೋಗಬೇಕಾದರೆ ಆ ಕಾರಣ ವನ್ನು ಅಲ್ಲಿ ನಮೂದಿಸಬೇಕು. ಅದಕ್ಕೆ ಸಂಬಂಧಪಟ್ಟವರ ಅನುಮತಿ ಬೇಕು. ಹೀಗಾಗಿ ಕಳ್ಳಾಟವಾಡುವ ಶಿಕ್ಷಕರನ್ನು ಆ್ಯಪ್ ಕಟ್ಟಿಹಾಕಿದೆ.

**ಶಿಕ್ಷಕರಿಗೆ ಕಾಡುತ್ತಿರುವ ತಾಂತ್ರಿಕ ಸಮಸ್ಯೆ**

ಸಮಯಕ್ಕೆ ತಲುಪಿದರೂ, ನೆಟ್‌ವರ್ಕ್ ಸಿಗದೆ ಲಾಗಿನ್ ಆಗಲು ಸಾಧ್ಯವಾಗುತ್ತಿಲ್ಲ. ಗ್ರಾಮೀಣ ಭಾಗದ ಶಾಲೆಗಳಿಗೆ ಸರಿಯಾದ ಬಸ್ ವ್ಯವಸ್ಥೆ ಇರುವುದಿಲ್ಲ. ಬಸ್‌ಗಳು ತಡವಾಗಿ ಬರುವುದು ಅಥವಾ ಕೈಕೊಡುವುದು ಸಾಮಾನ್ಯವಾಗಿದೆ. ಆದರೆ, ಹೊಸ ನಿಯಮದ ಪ್ರಕಾರ, ನಿಗದಿತ ಸಮಯಕ್ಕಿಂತ ಕೇವಲ 15 ನಿಮಿಷಗಳ ರಿಯಾಯಿತಿ ಮಾತ್ರ ನೀಡಲಾಗಿದೆ.

> **ಕರ್ತವ್ಯ-ಕಾಮ್ಸ್ ಹಾಗು ನಿರಂತರ ಆ್ಯಪ್‌ಗಳನ್ನು ಅಳವಡಿಸಿರುವುದು ಒಳ್ಳೆಯದೇ ಆದರೂ ಶಿಕ್ಷಕರು ಬಹುತೇಕ ಸಮಯವನ್ನು ಈ ಪ್ರಕ್ರಿಯೆಗಾಗಿ ಕಳೆಯಬೇಕಾಗುತ್ತದೆ. ಶಿಕ್ಷಕರಿಗೆ ಈಗಲೇ ಕೆಲಸದೊತ್ತಡ ಹೆಚ್ಚಿದೆ. ಈಗ ಆನ್‌ಲೈನ್ ಹಾಜರಾತಿ ಸೇರ್ಪಡೆಯಾಗಿದೆ.**
> **-ಹೆಸರು ಹೇಳಲಿಚ್ಛಿಸದ ಶಿಕ್ಷಕ**

ಕೆಲವೊಮ್ಮೆ ನೆಟ್‌ವರ್ಕ್ ಸಮಸ್ಯೆಯಿಂದಾಗಿ ಶಾಲೆಗೆ ಹೋದರೂ ಹಾಜರಾತಿ ಹಾಕಲಾಗದಂತಹ ಸಮಸ್ಯೆ ಶಿಕ್ಷಕರನ್ನು ಕಾಡುತ್ತಿದೆ. ಹೊಸ ವ್ಯವಸ್ಥೆಯಾದ್ದರಿಂದ ಆರಂಭದಲ್ಲಿ ಕೆಲವು ತೊಡಕುಗಳು ಎದುರಾಗಿವೆ. ಆ್ಯಪ್ ಬಳಕೆಯ ತಾಂತ್ರಿಕ ಜ್ಞಾನದ ಕೊರತೆ ಸಾಕಷ್ಟು ಶಿಕ್ಷಕರಲ್ಲಿದೆ. ಇನ್ನೂ ಹಲವರು ಕೀ ಪ್ಯಾಡ್ ಮೊಬೈಲ್‌ಗಳನ್ನೇ ಬಳಸುತ್ತಿದ್ದಾರೆ. ಅಂತಹವರಿಗೂ ಈ ಸ್ಮಾರ್ಟ್ ಹಾಜರಾತಿ ತಲೆನೋವಾಗಿ ಪರಿಣಮಿಸಿದೆ.

**ಮಕ್ಕಳಿಗೂ ಆನ್‌ಲೈನ್ ಹಾಜರಾತಿ**

ಈ ವರ್ಷದಿಂದ ಶಿಕ್ಷಕರಿಗೆ ಮಾತ್ರವಲ್ಲದೆ ಮಕ್ಕಳಿಗೂ ಆನ್‌ಲೈನ್ ಹಾಜರಾತಿ ಜಾರಿಗೊಳಿಸಲಾಗಿದೆ. ನಿರಂತರ ಎಂಬ ಆ್ಯಪ್‌ನ್ನು ಇಲಾಖೆ ಪರಿಚಯಿಸಿದೆ. ಅದರ ಬಳಕೆ ಕುರಿತು ಈಗಾಗಲೇ ಎಲ್ಲಾ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಜುಲೈ 1 ರಿಂದ ಆನ್‌ಲೈನ್‌ನಲ್ಲೇ ಮಕ್ಕಳ ಹಾಜರಾತಿ ದಾಖಲು ಮಾಡಬೇಕಿದೆ. ತರಗತಿವಾರು ಮಕ್ಕಳ ಫೋಟೊ, ಹೆಸರನ್ನು ನಮೂದಿಸಿರಬೇಕು. ಪ್ರತಿದಿನ ಬೆಳಿಗ್ಗೆ 10 ಗಂಟೆಗೆ ಎಲ್ಲಾ ಮಕ್ಕಳನ್ನು ಒಂದೆಡೆ ನಿಲ್ಲಿಸಿ ಫೋಟೊ ಕ್ಲಿಕ್ ಮಾಡಬೇಕು. ಅದರಲ್ಲಿ ಗೈರಾದ ಮಕ್ಕಳ ಫೋಟೊ ಸಹಿತ ವಿವರನ್ನು ಆ್ಯಪ್ ಕ್ಷಣಾರ್ಧದಲ್ಲಿ ನೀಡುತ್ತದೆ. ಆಗ ಗೈರು ಹಾಜರಾದ ಮಕ್ಕಳ ಪಾಲಕರಿಗೆ ಕರೆ ಮಾಡಿ ಶಾಲೆಗೆ ಕಳುಹಿಸುವಂತೆ ಶಿಕ್ಷಕರು ಕ್ರಮ ಕೈಗೊಳ್ಳಬೇಕು.

ಈ ಪ್ರಕ್ರಿಯೆಯು ಮಕ್ಕಳ ಶಿಕ್ಷಣವನ್ನು ಸರಿದಾರಿಗೆ ತರುವುದು ಮಾತ್ರವಲ್ಲದೆ ಮಧ್ಯಾಹ್ನದ ಬಿಸಿಯೂಟ ಲೆಕ್ಕವನ್ನು ನಿಖರವಾಗಿ ನೀಡುತ್ತದೆ. ಇಷ್ಟು ವರ್ಷಗಳ ಕಾಲ ಮಕ್ಕಳಿಗೆ ನೀಡುವ ಮೊಟ್ಟೆ, ಹಾಲು ಹಂಚಿಕೆಯಲ್ಲಿ ಕಡಿಮೆ ಮಕ್ಕಳಿದ್ದರೂ ಶಿಕ್ಷಕರು ಅಧಿಕ ಮೊತ್ತದ ಬಿಲ್ ಮಾಡಿಕೊಳ್ಳಲು ಅವಕಾಶವಿತ್ತು. ನಿರಂತರ ಆ್ಯಪ್ ಕಳ್ಳಾಟಗಳಿಗೆ ಸಂಪೂರ್ಣ ಕಡಿವಾಣ ಹಾಕಲಿದೆ.

# ವಿದ್ಯುತ್ ಸ್ಪರ್ಶಿಸಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹೊಸ ಮನೆಯ ಕಾಮಗಾರಿ ಪರಿಶೀಲಿಸುತ್ತಿದ್ದಾಗ ವಿದ್ಯುತ್ ಸ್ಪರ್ಶಿಸಿ ಗ್ರಾಮ ಪಂಚಾಯಿತಿ ಗ್ರೇಡ್ 2 ಕಾರ್ಯದರ್ಶಿ ಮೃತಪಟ್ಟಿರುವ ಘಟನೆ ಪಟ್ಟಣದ ಶ್ರೀ ಲಕ್ಷ್ಮೀ ಬಡಾವಣೆಯಲ್ಲಿ ನಡೆದಿದೆ.



ರಾಘವೇಂದ್ರ ಕುಮಾರ್.ಟಿ.ಎನ್ (41) ಮೃತ ನೌಕರ. ತಾಲ್ಲೂಕಿನ ಬೆಳಗೀಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಗ್ರೇಡ್ 2 ಕಾರ್ಯದರ್ಶಿಯಾಗಿದ್ದ ಅವರು ಬಡಾವಣೆಯಲ್ಲಿ ಹೊಸದಾಗಿ ಮನೆ ನಿರ್ಮಾಣ ಮಾಡುತ್ತಿದ್ದರು.

ಮನೆಯ ಕಾಮಗಾರಿ ವೀಕ್ಷಣೆಗೆ ಹೋಗಿದ್ದ ವೇಳೆ ಆಕಸ್ಮಿಕವಾಗಿ ವಿದ್ಯುತ್ ತಂತಿ ತಗುಲಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಾವಿನ ಭಂಡಾರ–ಅಜ್ಜಿಮನೆ



ಬೇಸಿಗೆ ರಜಾ ಪ್ರಾರಂಭವಾಗುವುದಕ್ಕೆ ಸರಿಯಾಗಿ ಮಾವಿನ ಹಣ್ಣಿನ ಸೀಸನ್ ಪ್ರಾರಂಭವಾಗುವುತ್ತಿತ್ತು. ನಾನಾ ನಮೂನೆ, ತರಹೇವಾರಿ, ಮಾವಿನ ಹಣ್ಣುಗಳ ರಾಶಿ ನಮ್ಮ ಅಜ್ಜಿ ಮನೆಯಲ್ಲಿ. ನಮ್ಮ ಅಜ್ಜಿಯವರ ಕಟ್ಟೆ ಜಮೀನಿನಲ್ಲಿ ಒಟ್ಟು 12 ಮಾವಿನ ಮರಗಳು, ಗಿಡ್ಡ ಕಪಿಲೆಯಲ್ಲಿ ಒಂದು ಕಸಿ ಮಾವಿನ ಮರ ಇದ್ದವು. ಒಟ್ಟು ಹದಿಮೂರು ಮರಗಳು. ಒಂದು ಕಡೆ ಏಳು ಮಾವಿನ ಮರದ ಪಟ್ಟಿ ಇನ್ನೊಂದು ಕಡೆ ಎರಡು ಮಾವಿನ ಮರ, ಮತ್ತೊಂದು ಕಡೆ ಮೂರು ಮಾವಿನ ಮರಗಳು ಗುಂಪು ಗುಂಪಾಗಿದ್ದವು. ಮೂರು ಮಾವಿನ ಮರಗಳು ದೂರದಿಂದ ನೋಡಿದರೆ ನಮ್ಮ ಬೆಂಗಳೂರಿನ ದೊಡ್ಡ ಆಲದಮರ ನೋಡಿದ ಹಾಗೆ ಅನ್ನಿಸುತ್ತಿತ್ತು. ಮರಗಳ ಎತ್ತರ 30 – 35 ಅಡಿ ಇದ್ದರೂ ಅವುಗಳ ರೆಂಬೆಗಳು ನೆಲದಿಂದ ಎರಡು – ಎರಡುವರೆ ಅಡಿ ಎತ್ತರದಲ್ಲಿರುತ್ತಿದ್ದವು. ಚಿಕ್ಕ ಮಕ್ಕಳಾದರೂ ಮಾವಿನ ಹಣ್ಣುಗಳು ನಮ್ಮ ಕೈಗೆ ಸಿಗುತ್ತಿದ್ದವು. ದೂರದಿಂದ ನೋಡಿದರೆ ಆ ಮರಗಳಲ್ಲಿ ಎಲೆಗಳಿಗಿಂತ ಕಾಯಿಗಳೇ ಹೆಚ್ಚಾಗಿ ಕಾಣುತ್ತಿದ್ದವು.

ಆ ಮರಗಳಲ್ಲಿ ಒಂದೊಂದು ಮರ, ಒಂದೊಂದು ತಳಿ. ಎಲ್ಲಾ ಸ್ಥಳೀಯ ನಾಟಿ ತಳಿಗಳು. ಅಭಿವೃದ್ಧಿ ಪಡಿಸಿದ ಈಗಿನ ಬಾದಾಮ್, ರತ್ನಗಿರಿ, ರಸಪೂರಿ ಮಲ್ಲಿಕಾ, ಬೈಗನ್ ಪಲ್ಲಿ ತರಹ ಅಲ್ಲ. ಇವೆಲ್ಲ ಕೃಷಿ ವಿಜ್ಞಾನಿಗಳು ಅಭಿವೃದ್ಧಿ ಪಡಿಸಿದ ತಳಿಗಳು. ಆದರೆ ಇವು ನಾಟಿ ತಳಿಗಳು. ಹೋಳಿಗೆ ಮಾವು, ಸೀಕರಣೆ ಮಾವು, ಉತ್ತತ್ತಿ ಮಾವು, ಕೊಬ್ಬರಿ ಮಾವು, ಕತ್ತೆ ಮಾವು, ಉಪ್ಪಿನ ಕಾಯಿ ಮಾವು, ಕರಿಮಾವು, ಸಜ್ಜಿಟ್ಟಿನ ಮಾವು, ಸಕಲಾತಿ ಮಾವು, ಜೀರಿಗೆ ಮಾವು, ಹೀಗೆ ಒಂದೊಂದು ಮರ ಒಂದೊಂದು ನಮೂನೆ. ತಿನ್ನುವ ವಿಧಾನದಲ್ಲೂ, ರುಚಿಯಲ್ಲೂ, ಉಪಯೋಗದಲ್ಲೂ, ಗಾತ್ರದಲ್ಲೂ, ಬಣ್ಣದಲ್ಲೂ. ಹೋಳಿಗೆ ಮಾವು ಹೋಳಿಗೆಯಷ್ಟು ಸಿಹಿ, ಸೀಕರಣೆ ಮಾವಿನ ತಿರುಳು ನಾರಿಲ್ಲದೇ ಸೀಕರಣೆಗೆ ಅತ್ಯಂತ ಸೂಕ್ತವಾಗಿರುತ್ತಿತ್ತು. ಉತ್ತತ್ತಿ ಮಾವು ಉತ್ತತ್ತಿ ತರಹ ಚಿಕ್ಕ ಹಣ್ಣು, ಕೊಬ್ಬರಿ ಮಾವು, ಹಣ್ಣಿಗಿಂತಲೂ ಕಾಯಿ ಸಿಹಿಯಾಗಿರುತ್ತಿತ್ತು. ಕಾಯಿಯನ್ನು ಹಾಗೇ ಕಚ್ಚಿ ತಿಂದರೆ ಕೊಬ್ಬರಿ ತಿಂದ ಹಾಗೆ ಆಗುತ್ತಿತ್ತು. ಕತ್ತೆ ಮಾವು ತಳಿಯ ಹಣ್ಣಿನ ಸಿಪ್ಪೆ ಕತ್ತೆಯ ಚರ್ಮದ ತರಹ ತರ ದಪ್ಪ, ಉಪ್ಪಿನಕಾಯಿ ಮಾವು ಉಪ್ಪಿನಕಾಯಿ ಹಾಕಲು ಸೂಕ್ತ, ಜೀರಿಗೆ ಮಾವು ಜೀರಿಗೆಯಂತೆ ರುಚಿ. (ಉಳಿದವುಗಳ ವಿಶೇಷತೆ ಈಗ ನೆನಪಿಲ್ಲ)

ಈ ಹಣ್ಣುಗಳನ್ನು ತಿನ್ನುವ ರೀತಿ ಕೂಡ ವಿಭಿನ್ನ. ಎಲ್ಲಾ ಹಣ್ಣುಗಳನ್ನು ಒಂದೇ ರೀತಿ ತಿನ್ನುತ್ತಿರಲಿಲ್ಲ. ಒಂದು ಹಣ್ಣಿನ ತುದಿಯನ್ನು ಸ್ವಲ್ಪ ಕಚ್ಚಿ ರಂಧ್ರ ಮಾಡಿಕೊಂಡು, ನಂತರ ಹಣ್ಣನ್ನು ಹಿಚುಕಿ, ಹಿಚುಕಿ, ಬಂದ ರಸವನ್ನು ರಂಧ್ರದ ಮೂಲಕ ಹೀರಿ ಹೀರಿ, ಎಲ್ಲಾ ಮುಗಿದ ಮೇಲೆ ರಂಧ್ರದ ಗಾತ್ರ ದೊಡ್ಡದು ಮಾಡಿಕೊಂಡು ವಾಟೆಯನ್ನು ಹೊರಗೆತೆಗೆದು, ನೆಕ್ಕಿ, ನೆಕ್ಕಿ ಅನುಭವಿಸಿ ತಿನ್ನುತ್ತಿದ್ದೆವು. ಇನ್ನೊಂದು ತಳಿ ನಾರು ಇರುತ್ತಿತ್ತು. ಅದನ್ನು ಸಿಪ್ಪೆ ಪೂರ್ತಿ ತೆಗೆದು, ನಾರಿನ ಮೂಲಕ ರಸ ಹೀರಿಕೊಂಡು ತಿನ್ನುತ್ತಿದ್ದೆವು. ಒಂದೊಂದು ತಳಿಗಳೂ ಒಂದೊಂದು ವಿಶೇಷ. ಸೀಕರಣೆ ಮಾವಿನಲ್ಲಿ ನಾರು ಇರುತ್ತಿರಲಿಲ್ಲ ಆದರೆ ಸಿಹಿ ಇರುತ್ತಿತ್ತು ಆದ್ದರಿಂದ ಸೀಕರಣೆ ಮಾಡಿ ಹೋಳಿಗೆ, ಅಂಗರೋಳಿಗೆ ಮಾಡಿಕೊಡುತ್ತಿದ್ದರು. ಈ ಹಣ್ಣುಗಳನ್ನು ಕೊಯ್ಲು ಮಾಡುವುದಕ್ಕೆ ಮಾವಿನ ಮರ ಇಳಿಸುವುದು ಎನ್ನುತ್ತಿದ್ದರು. ಮಾಗಿದ ಕಾಯಿಗಳು ಹಣ್ಣಾಗಿ ಕೆಳಗೆ ಬೀಳುವ ಮೊದಲೇ, ಆಳುಗಳು ಮರ ಏರಿ, ಕೆಳಗೆ ಅಗಲವಾಗಿ ಹಿಡಿದ ಗೋಣಿಚೀಲದಲ್ಲಿ ಹಾಕುತ್ತಿದ್ದರು. ನೆಲದ ಮೇಲೆ ಬಿದ್ದರೆ ಕಾಯಿಗೆ/ ಹಣ್ಣಿಗೆ ಏಟಾಗಿ ಹಾಳಾಗುವ ಸಂಭವ ಇರುತ್ತಿತ್ತು. ಈ ರೀತಿ ಇಳಿಸಿದ ಮಾವಿನ ಹಣ್ಣು/ ಕಾಯಿಗಳನ್ನು ಮನೆಗೆ ತಂದು, ಹಿಂದಲ ಮನೆಯ ಕೊನೆಯ ಮೂಲೆಗೆ ನಮ್ಮ ದೊಡ್ಡಮ್ಮ ನೆಲ್ಲು ಹುಲ್ಲಿನ ಹಾಸಿಗೆ ಮಾಡಿ ಅದರ ಮೇಲೆ ಒಂದಕ್ಕೊಂದು ತಗಲದಂತೆ ಇಡುತ್ತಿದ್ದರು. ಮತ್ತೆ ಅವುಗಳ ಮೇಲೆ ಹುಲ್ಲು ಮುಚ್ಚಿ ಇಡುತ್ತಿದ್ದರು. ಇದಕ್ಕೆ ಮಾಗಿ ಹಾಕುವುದು ಎನ್ನುತ್ತಿದ್ದರು. ಹೀಗೆ ಮಾಗಿ ಹಾಕಿದ ಕಾಯಿಗಳು ಸ್ವಲ್ಪ ದಿನದಲ್ಲಿ ಅಂದರೆ ಐದರಿಂದ ಏಳು ದಿನದಲ್ಲಿ ಹಣ್ಣಾಗುತ್ತಿದ್ದವು. ಹಣ್ಣು ಆದ ಆದ ಹಾಗೆ ಬುಟ್ಟಿಯಲ್ಲಿ ತುಂಬಿಕೊಂಡು ಹೊರಗೆ ತರುತ್ತಿದ್ದರು. ನಾವೆಲ್ಲ ರಜೆಗೆ ಹೋದ ಹುಡುಗರೆಲ್ಲ, ದೊಡ್ಡವರು, ಚಿಕ್ಕವರು, ಎಲ್ಲರೂ ಬುಟ್ಟಿಗಳು ಖಾಲಿಯಾಗುವ ತನಕ ತಿಂದು, ತಿಂದು, ದನ ಕಟ್ಟುವ ದೆನೆಕೆಯಲ್ಲಿ ಹಾಕುತ್ತಿದ್ದೆವು. ತಿನ್ನೋದೆಲ್ಲ ಮುಗಿದ ಮೇಲೆ ಯಾರಾದರೂ ದೊಡ್ಡವರು ಅದನ್ನೆಲ್ಲ ಸ್ವಚ್ಛ ಮಾಡುತ್ತಿದ್ದರು. ಇದಲ್ಲದೆ ಹೋಳಿಗೆ ಸೀಕರಣೆಯ ಸಮಾರಾಧನೆ ಆಗುತ್ತಿತ್ತು. ಅವರಿಗೆ ಇವರಿಗೆ ಹಂಚುವುದು, ನೆಂಟರಿಷ್ಟರಿಗೆ ಕಳುಹಿಸುವುದು ಮಾಡುತ್ತಿದ್ದರು. ನಮ್ಮ ಅಜ್ಜಿಯವರು ಮಾವಿನ ಹಣ್ಣುಗಳನ್ನು ಮಾರಿದ್ದು ನಮಗೆ ನೆನಪೇ ಇಲ್ಲ.

ಆದರೂ ಒಮ್ಮೆ ಒಂದು ಬುಟ್ಟಿಯಲ್ಲಿ ಸುಮಾರು 25 ಹಣ್ಣುಗಳನ್ನು ಇಟ್ಟು 5 ಪೈಸೆಗೆ ಒಂದರಂತೆ ಮಾರಿಕೊಂಡು ಬರಲು ನನ್ನನ್ನು, ನನ್ನ ತಂಗಿಯನ್ನು ಕಳುಹಿಸಿದರು. ನಾವು ಅಷ್ಟು ದೂರ ಹೋಗುತ್ತಿದ್ದಂತೆ ಪೋಸ್ಟ್ ಗೌರಮ್ಮ ಸಣ್ಣಿ, ಕರೆದು ಕೇಳಿದಾಗ ನಾವು 5 ಪೈಸೆಗೆ ಒಂದು ಎಂದು ತಿಳಿಸಿದರೆ, ಅವರು ಇಡೀ ಬುಟ್ಟಿಯನ್ನು ಇಟ್ಟುಕೊಂಡು 25 ಪೈಸೆ ಕೊಟ್ಟು ಕಳುಹಿಸಿಬಿಟ್ಟರು. ಇದನ್ನು ನೋಡಿ ನಮ್ಮ ದೊಡ್ಡಮ್ಮ, ಈ ರೀತಿ ವ್ಯಾಪಾರ ಮಾಡುವುದಕ್ಕಿಂತ ಸುಮ್ಮನೆ ಮನೆಯಲ್ಲಿ ತಿನ್ನೋದು ಮೇಲು, ಎಂದು ಮತ್ತೆ ಹಣ್ಣು ಮಾರುವ ಗೋಜಿಗೆ ಹೋಗಲಿಲ್ಲ.

ಮತ್ತೊಮ್ಮೆ ನಮ್ಮಣ್ಣ ಮೆತ್ತಗೆ ಹಿಂದಲ ಮನೆಗೆ ಕಳ್ಳತನದಲ್ಲಿ, ಹೋಗಿ 8 – 10 ಮಾವಿನ ಹಣ್ಣುಗಳನ್ನು ಪಂಚೆಯಲ್ಲಿ ಇಟ್ಟುಕೊಂಡು, ಪಂಚೆ ಮೇಲೆ ಕಟ್ಟಿಕೊಂಡು, ಮೆತ್ತಗೆ ಮಾಳಿಗೆ ಮೇಲೆ ಹೋಗಿ ಹಣ್ಣನೆಲ್ಲಾ ತಿಂದು ಏನೂ ಗೊತ್ತಿಲ್ಲದವರಂತೆ ವಾಪಸು ಬರುತ್ತಿದ್ದರು. ಒಮ್ಮೆ ನಮ್ಮ ಪತ್ತೆದಾರಿ ಕಣ್ಣಿಗೆ ಸಿಕ್ಕಿ ಹಾಕಿಕೊಂಡು, ನಾವು ಅವರನ್ನು ಹಿಂಬಾಲಿಸಿದಾಗ ಯಾರಿಗೂ ಹೇಳಬೇಡ್ರೋ ಅಂತ ನಮಗೂ ಒಂದೊಂದು ಹಣ್ಣು ಲಂಚ ಕೊಟ್ಟಿದ್ದರು.

ಇನ್ನೊಮ್ಮೆ ನಾವು ಅಣ್ಣನವರ ಜೊತೆ ಕಟ್ಟೆ ಜಮೀನಿನಲ್ಲಿ, ಬಾವಿಯಲ್ಲಿ ಈಜಾಡಿಕೊಂಡು, ಹಸಿ ಬಟ್ಟೆಗಳನ್ನು ತಲೆಯ ಮೇಲೆ ಹಾಕಿಕೊಂಡು, ಬರುತ್ತಾ ಇದ್ದೆವು. ಮೂರು ಮಾವಿನ ಮರದ ಪಟ್ಟಿಯ ಬಳಿ ಬಂದಾಗ, ಮಾವಿನ ಮರದ ಕೆಳಗೆ ನೆಲದ ಮೇಲೆ ಮಣ್ಣಿನ ಅಡಿಯಲ್ಲಿ ಮಾವಿನಹಣ್ಣಿನ ಸಿಪ್ಪೆ ಕಂಡ ಹಾಗಾಯಿತು. ಕುತೂಹಲದಿಂದ ಕಾಲಿನಲ್ಲಿ ಹಾಗೇ ಸವರಿದರೆ, ಅದು ಸಿಪ್ಪೆಯಾಗಿರದೇ ಪೂರ್ತಿ ಹಣ್ಣೇ ಆಗಿತ್ತು. ಹಾಗೇ ತೆಗೆಯುತ್ತಾ ಹೋದರೆ ಸುಮಾರು 20 ರಿಂದ 25 ಹಣ್ಣುಗಳು ಸಿಕ್ಕವು. ಯಾರೋ ಹಣ್ಣು ಕದ್ದು, ಅಲ್ಲಿ ಮುಚ್ಚಿಟ್ಟಿದ್ದು, ನಮಗೆ ಸಿಕ್ಕಿತು. ಹಾಗೇ ಹಣ್ಣುಗಳನ್ನು ತೆಗೆದುಕೊಂಡು ವಾಪಸ್ ಬಾವಿಯ ಬಳಿಗೆ ಹಿಂದಕ್ಕೆ ಹೋಗಿ, ಆ ಹಣ್ಣುಗಳನ್ನೆಲ್ಲಾ ತಿಂದು ಕೈಬಾಯಿ ತೊಳೆದುಕೊಂಡು, ಏನೂ ಗೊತ್ತಿಲ್ಲದವರ ಹಾಗೆ ಮನೆಗೆ ಹೋದೆವು. ಹೀಗೆ ಮಾವಿನ ಹಣ್ಣುಗಳ ಜೊತೆ ನಾವು ಆಡದ ಆಟ ಇರಲಿಲ್ಲ.

ಆದರೆ ಬರ ಬರುತ್ತಾ, ನಾವು ದೊಡ್ಡವರಾದಂತೆಲ್ಲಾ ಈ ಎಲ್ಲಾ ಮರಗಳೂ ಹಳೆಯದಾಗುತ್ತಾ ಬಂದು, ಮಳೆ ಬೆಳೆ ಕಡಿಮೆಯಾಗಿ, ಕಾಯಿ ಕಚ್ಚೋದು ಕಡಿಮೆಯಾಗಿ, ಜೋನಿ ಎನ್ನುವ ಕೀಟ ಭಾದೆಯಿಂದ, ಇಳುವರಿ ಇಲ್ಲದೆ, ಮರಗಳು ಬರಡಾದವು. ಇತ್ತೀಚೆಗೆ ಈ ಎಲ್ಲಾ 12 ಮರಗಳನ್ನು ಕಡಿದು ಸೌದೆಯಾಗಿ ಮಾರಿಬಿಟ್ಟರು. ಈಗ ಆ ಕಟ್ಟೆಯ ಜಮೀನಿಗೆ ಹೋದರೆ ಒಂದೇ ಒಂದು ಮಾವಿನ ಮರವಿಲ್ಲ. ಹಳೆಯದೆಲ್ಲ ನೆನಪಿಗೆ ಬಂದು ಕಣ್ಣು ತೇವವಾಗುತ್ತದೆ.

## ಟೈಗರ್

ಅಂಕಲ್, ನಿಮಿಂದ ಒಂದು ಸಹಾಯ ಬೇಕಿತ್ತು. ಕಾಂಪೌಂಡ್ ಗೇಟಿನ ಬಳಿ ನೇಹಾ ಕೇಳಿದಾಗ ನಾನು ಗಿಡಗಳಿಗೆ ನೀರು ಹಾಕುತ್ತಿದ್ದೆ.

ಹೇಳಮ್ಮ, ಏನದು?

ಮುಂದಿನ ವಾರ ವಿಯೆಟ್ನಾಂ ಹೋಗ್ತಿದ್ದೀವಿ. ನಮ್ಮ ಟೈಗರ್ ನಿಮ್ಮ ಜೊತೆ ಬಿಟ್ಟು ಹೋಗೋಣ ಅಂತ. ಆಗಬಹುದೇ ಅಂಕಲ್? ಟೈಗರ್ ನನ್ನನ್ನು ನೋಡಿ ಬಾಲ ಅಲ್ಲಾಡಿಸಿದ.

ನೇಹಾ, ಟೈಗರ್ ನನಗೇನೂ ಹೊಸಬನಲ್ಲ, ಆದರೆ ನನಗೆ ನಾಯಿಗಳನ್ನು ನೋಡಿಕೊಂಡು ಅಭ್ಯಾಸವಿಲ್ಲವಲ್ಲ

ಒಂದು ವಾರ ಟೈಮ್ ಇದೆಯಲ್ಲ, ಅಂಕಲ್ ಇಂದಿನಿಂದಲೇ ರಾತ್ರಿ ನಿಮ್ಮ ಮನೆಯಲ್ಲೇ ಮಲಗಿಸುತ್ತೇವೆ. ನಿಮ್ಮ ಕಾಂಪೌಂಡ್‌ನಲ್ಲೇ ಓಡಾಡಿಸುತ್ತೇವೆ. ಅಭ್ಯಾಸ ಆಗತ್ತೆ. ವರಿ ಮಾಡಬೇಡಿ.

ಹೋದ ವರ್ಷ ಹೀಗೆ ರಜೆಯಲ್ಲಿ ಹೋದಾಗ ಅದ್ಯಾವುದೋ ಕೇರ್‌ಟೇಕರ್ ಹತ್ತಿರ ಬಿಟ್ಟು ಹೋಗಿದ್ದೀರಿ, ಅಲ್ಲವಾ?



ಹೌದು ಅಂಕಲ್, ಆದರೆ ಈಗ ಅವನು ಊರಿನಲಿಲ್ಲ, ಬಿಸ್ನೆಸ್ ಸರಿಯಾಗಿ ನಡೀಲಿಲ್ಲವಂತೆ. ಮುಚ್ಚಿಬಿಟ್ಟ ಜೊತೆಗೆ, ಹೋದ ಸಾರಿ ಅವನು ಟೈಗರ್‌ನ ಚೆನ್ನಾಗಿ ನೋಡಿಕೊಂಡಿರಲಿಲ್ಲ. ನಿದ್ದೆ ಮಾತ್ರೆ ತಿನ್ನಿಸಿ ಮಲಗಿಸುತ್ತಿದ್ದ ಅಂತ ಆಮೇಲೆ ಗೊತ್ತಾಯಿತು.

ಆಯಿತು, ಹಾಗಾದರೆ ನನಗೂ ನಾಲ್ಕು ಪ್ಯಾಕೆಟ್ ನಿದ್ದೆ ಮಾತ್ರೆ ತಂದುಕೊಡು. ಟೈಗರ್ ಜೊತೆ ನಾನೂ ಆರಾಮಾಗಿ ಮಲಗ್ತಿನಿ.

ಹಹಹ... ಒಳ್ಳೆ ಜೋಕ್ ಅಂಕಲ್

ಅಂದುಕೊಂಡಿದ್ದಕ್ಕಿಂತ ಟೈಗರ್ ನನಗೆ ಚೆನ್ನಾಗಿ ಹೊಂದಿಕೊಂಡ. ಎಲ್ಲಿ ಒಂದ ಮಾಡೋದು, ಎಲ್ಲಿ ಕಕ್ಕ ಮಾಡೋದು ಅನ್ನೋದನ್ನೆಲ್ಲಾ ಅವಳು ಮೊದಲೇ ಚೆನ್ನಾಗಿ ಹೇಳಿಕೊಟ್ಟಿದ್ದಳು.

ನಾನೂ ಒಬ್ಬನೇ. ಒಟ್ಟಿಗೆ ಊಟ ಮಾಡುತ್ತಿದ್ದೆವು. ಬೆಳಗ್ಗೆ-ಸಂಜೆ ಪಾರ್ಕಿನಲ್ಲಿ ಓಡಾಡಿಸಿಕೊಂಡು ಬರುತ್ತಿದ್ದೆ. ರಾತ್ರಿ ಮುದುರಿಕೊಂಡು ಚೆನ್ನಾಗಿ ನಿದ್ದೆ ಮಾಡುತ್ತಿದ್ದ

ಹದಿನೈದು ದಿನ ಕಳೆದದ್ದು ಗೊತ್ತಾಗಲೇ ಇಲ್ಲ ಅಂದು ರಾತ್ರಿ, ಜಿಟಿಜಿಟಿ ಮಳೆ ಬೀಳುತ್ತಿತ್ತು. ಹನ್ನೊಂದರ ಸುಮಾರಿಗೆ ಮನೆಯ ಮುಂದೆ ಟ್ಯಾಕ್ಸಿ ಬಂದು ನಿಂತ ಸದ್ದಾಯಿತು.

ಟ್ರಿಪ್ ಚೆನ್ನಾಗಿ ಆಯಿತೇ ನೇಹಾ? ಅಂದೆ.

ಸೂಪರ್ ಆಗಿತ್ತು ಅಂಕಲ್ ಅಂದಳು.

ಟೈಗರ್ ಮಲಗಿದ್ದಾನೆ. ನಾಳೆ ಬೆಳಗ್ಗೆ ಬಂದು ಕರ್ಕೊಂಡು ಹೋಗಿ.

ಒಳಗೆ ಬಂದು ಟೈಗರ್ ಕಡೆ ನೋಡಿದೆ. ಗೊರಕೆ ಹೊಡೀತಿದ್ದ.

ನಿದ್ದೆ ಮಾತ್ರೆ...!

– ಗಿರಿಧರ್ ಖಾಸನೀಸ್

# ಯೂರಿಕ್ ಆಮ್ಲ ಹೆಚ್ಚಳದಿಂದಾಗುವ ಸಮಸ್ಯೆ ಮತ್ತು ನಿಯಂತ್ರಣ

ಇತ್ತೀಚಿನ ದಿನಗಳಲ್ಲಿ ಯೂರಿಕ್ ಆಮ್ಲ ಹೆಚ್ಚಾಗುವ ಸಮಸ್ಯೆ ಯುವಕರಿಂದ ಹಿಡಿದು ವಯಸ್ಸಾದವರವರೆಗೆ ಎಲ್ಲರನ್ನೂ ಕಾಡುತ್ತಿದೆ. ಆರಂಭದಲ್ಲೇ ಇದನ್ನು ಪತ್ತೆಹಚ್ಚಿ ಚಿಕಿತ್ಸೆ ಪಡೆಯದಿದ್ದರೆ, ಭವಿಷ್ಯದಲ್ಲಿ ಇದು ಗೌಟ್ (ಕೀಲು ವಾತ), ಕಿಡ್ನಿ ಕಲ್ಲುಗಳು ಮತ್ತು ಕೀಲುಗಳ ಶಾಶ್ವತ ಹಾನಿಗೆ ದಾರಿ ಮಾಡಿಕೊಡಬಹುದು.

ನಿಜಕ್ಕೂ ಯೂರಿಕ್ ಆಮ್ಲ ಎಂದರೇನು? ಇದು ನಮ್ಮ ದೇಹದಲ್ಲಿ ಸಹಜವಾಗಿ ಉತ್ಪತ್ತಿಯಾಗುವ ಒಂದು ತ್ಯಾಜ್ಯ ಪದಾರ್ಥ. ನಾವು ಸೇವಿಸುವ ಕೆಲವು ಆಹಾರಗಳಲ್ಲಿ ಮತ್ತು ನಮ್ಮ ದೇಹದಲ್ಲಿ ಪ್ಯೂರಿನ್ ಎಂಬ ರಾಸಾಯನಿಕವಿರುತ್ತದೆ. ದೇಹವು ಈ ಪ್ಯೂರಿನ್ ಅನ್ನು ಜೀರ್ಣಿಸಿಕೊಳ್ಳುವಾಗ ಯೂರಿಕ್ ಆಮ್ಲ ಬಿಡುಗಡೆಯಾಗುತ್ತದೆ. ಸಾಮಾನ್ಯವಾಗಿ ಇದು ರಕ್ತದಲ್ಲಿ ಕರಗಿ, ಕಿಡ್ನಿಗಳ ಮೂಲಕ ಮೂತ್ರದ ರೂಪದಲ್ಲಿ ದೇಹದಿಂದ ಹೊರಹೋಗುತ್ತದೆ. ಆದರೆ, ಇದರ ಪ್ರಮಾಣ ಅತಿಯಾದಾಗ ಕಿಡ್ನಿಗಳಿಗೆ ಅದನ್ನು ಹೊರಹಾಕಲು ಸಾಧ್ಯವಾಗದೆ, ಅದು ಹರಳುಗಳ ರೂಪದಲ್ಲಿ ಕೀಲುಗಳಲ್ಲಿ ಶೇಖರಣೆಯಾಗಲು ಜಮೆಯಾಗುತ್ತದೆ.

**ಯೂರಿಕ್ ಆಮ್ಲವನ್ನು ನಿಯಂತ್ರಣದಲ್ಲಿಡಲು ಸರಳ ಉಪಾಯಗಳು**

ನಿಮ್ಮ ದಿನನಿತ್ಯದ ಆಹಾರ ಪದ್ಧತಿ ಮತ್ತು ಜೀವನಶೈಲಿಯಲ್ಲಿ ಕೊಂಚ ಬದಲಾವಣೆ ಮಾಡಿಕೊಳ್ಳುವುದರಿಂದ ಈ ಸಮಸ್ಯೆಯನ್ನು ಸುಲಭವಾಗಿ ಹತೋಟಿಗೆ ತರಬಹುದು.


**1. ಆಹಾರದಲ್ಲಿ ಈ ಬದಲಾವಣೆ ಇರಲಿ:**

★ **ಪ್ಯೂರಿನ್ ಮುಕ್ತ ಆಹಾರ:** ಕೆಂಪು ಮಾಂಸ, ಮೀನು ಸೇರಿದಂತೆ ಸಮುದ್ರಾಹಾರ ಹಾಗೂ ಕೆಲವು ದ್ವಿದಳ ಧಾನ್ಯಗಳ ಸೇವನೆಯನ್ನು ಆದಷ್ಟು ಕಡಿಮೆ ಮಾಡಿ.

★ **ಸಕ್ಕರೆಗೆ ಬ್ರೇಕ್ ಹಾಕಿ:** ಕೃತಕ ಸಕ್ಕರೆ, ಸೋಡಾ, ಸಾಫ್ಟ್ ಡ್ರಿಂಕ್ಸ್ ಮತ್ತು ಪ್ಯಾಕ್ ಮಾಡಿದ ಹಣ್ಣಿನ ರಸಗಳಿಂದ ದೂರವಿರಿ. ಇವುಗಳಲ್ಲಿರುವ ಫ್ರುಕ್ಟೋಸ್ ಯೂರಿಕ್ ಆಮ್ಲವನ್ನು ಹೆಚ್ಚಿಸುತ್ತದೆ.

★ **ನಾರಿನಂಶ ಹೆಚ್ಚಿಸಿ:** ಓಟ್ಸ್, ಬ್ರೊಕೋಲಿ, ಆಪಲ್ ನಂತಹ ಫೈಬರ್ ಹೆಚ್ಚಿರುವ ಆಹಾರಗಳನ್ನು ಸೇವಿಸಿ. ಇವು ಯೂರಿಕ್ ಆಮ್ಲವನ್ನು ಹೀರಿಕೊಳ್ಳಲು ಸಹಾಯ ಮಾಡುತ್ತವೆ.

**2. ನೀರಿನ ಸೇವನೆ ಅತ್ಯಗತ್ಯ:** ದಿನಕ್ಕೆ ಕನಿಷ್ಠ 2 ರಿಂದ 3 ಲೀಟರ್ ನೀರು




ಕುಡಿಯುವುದನ್ನು ರೂಢಿ ಮಾಡಿಕೊಳ್ಳಿ. ಹೆಚ್ಚು ನೀರು ಕುಡಿದಷ್ಟೂ ಕಿಡ್ನಿಗಳು ಯೂರಿಕ್ ಆಮ್ಲವನ್ನು ಮೂತ್ರದ ಮೂಲಕ ಸುಲಭವಾಗಿ ದೇಹದಿಂದ ಹೊರಹಾಕುತ್ತವೆ.

**3. ಪರಿಣಾಮಕಾರಿ ಮನೆಮದ್ದುಗಳು:**

★ **ಆಪಲ್ ಸೈಡರ್ ವಿನೆಗರ್:** ಒಂದು ಗ್ಲಾಸ್ ನೀರಿಗೆ ಒಂದು ಚಮಚ ಆಪಲ್ ಸೈಡರ್ ವಿನೆಗರ್ ಬೆರೆಸಿ ಕುಡಿಯುವುದರಿಂದ ದೇಹದ ಪಿಹೆಚ್ ಮಟ್ಟ ಸಮತೋಲನಕ್ಕೆ ಬರುತ್ತದೆ.

★ **ನಿಂಬೆ ಹಣ್ಣಿನ ರಸ:** ನಿಂಬೆ ಹಣ್ಣಿನಲ್ಲಿರುವ ವಿಟಮಿನ್ ಸಿ ಯೂರಿಕ್ ಆಮ್ಲದ ಕರಗುವಿಕೆಗೆ ನೆರವಾಗುತ್ತದೆ.

★ **ಸೆಲರಿ ಜ್ಯೂಸ್:** ಸೆಲರಿ ಸೊಪ್ಪಿನ ನೀರು ದೇಹದ ಉರಿಯೂತವನ್ನು ಕಡಿಮೆ ಮಾಡಿ, ಮೂತ್ರವರ್ಧಕವಾಗಿ ಕೆಲಸ ಮಾಡುತ್ತದೆ.

**4. ತೂಕ ನಿರ್ವಹಣೆ ಮತ್ತು ವ್ಯಾಯಾಮ:** ಅತಿಯಾದ ದೇಹದ ತೂಕ ಕೂಡ ಯೂರಿಕ್ ಆಮ್ಲ ಹೆಚ್ಚಾಗಲು ಒಂದು ಕಾರಣ. ಹಾಗಾಗಿ ದಿನಾಲೂ ನಿಯಮಿತವಾಗಿ ವ್ಯಾಯಾಮ ಮಾಡುವುದು, ಯೋಗ ಮಾಡುವುದು ಮತ್ತು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದರಿಂದ ತೂಕದ ಜೊತೆಗೆ ಯೂರಿಕ್ ಆಮ್ಲವನ್ನೂ ನಿಯಂತ್ರಣದಲ್ಲಿಡಬಹುದು.

– ಕೆ.ಪಿ.ಅಶ್ವಿನ್ ರಾವ್

### ಯೂರಿಕ್ ಆಮ್ಲ ಹೆಚ್ಚಾದಾಗ ಕಂಡುಬರುವ ಪ್ರಮುಖ ಲಕ್ಷಣಗಳು

- ★ ಅಸಹನೀಯ ಕೀಲು ನೋವು: ಹಠಾತ್ತಾಗಿ ಕೀಲುಗಳಲ್ಲಿ ತೀವ್ರವಾದ ನೋವು ಕಾಣಿಸಿಕೊಳ್ಳುತ್ತದೆ. ಮುಖ್ಯವಾಗಿ ಹೆಬ್ಬೆರಳು, ಹಿಮ್ಮಡಿ, ಮೊಣಕಾಲು ಮತ್ತು ಮೊಣಕೈಗಳಲ್ಲಿ ಈ ನೋವು ಹೆಚ್ಚಾಗಿರುತ್ತದೆ.
- ★ ಊತ ಮತ್ತು ಉರಿ: ನೋವಿರುವ ಕೀಲುಗಳ ಸುತ್ತಲೂ ಊತ ಕಾಣಿಸಿಕೊಳ್ಳುತ್ತದೆ. ಆ ಭಾಗದ ಚರ್ಮವು ಕೆಂಪಗಾಗುವುದು ಮತ್ತು ಮುಟ್ಟಿದರೆ ಬಿಸಿಯಾದ ಅನುಭವವಾಗುವುದು ಇದರ ಲಕ್ಷಣ.
- ★ ಕೀಲುಗಳ ಬಿಗಿತ: ಬೆಳಗ್ಗೆ ಎದ್ದ ತಕ್ಷಣ ಕೈಕಾಲುಗಳನ್ನು ಅಥವಾ ಕೀಲುಗಳನ್ನು ಸುಲಭವಾಗಿ ಚಲಿಸಲು ಸಾಧ್ಯವಾಗದೆ ಬಿಗಿತ ಉಂಟಾಗುತ್ತದೆ.
- ★ ದೇಹದ ಮೇಲೆ ಗಂಟುಗಳು: ದೀರ್ಘಕಾಲದವರೆಗೆ ಯೂರಿಕ್ ಆಮ್ಲ ನಿಯಂತ್ರಣಕ್ಕೆ ಬರದಿದ್ದರೆ, ಕೀಲುಗಳ ಸುತ್ತಮುತ್ತ ಸಣ್ಣ ಸಣ್ಣ ಗಂಟುಗಳು ಅಥವಾ ಉಬ್ಬುಗಳು ಮೂಡಲು ಪ್ರಾರಂಭಿಸುತ್ತವೆ.

# ಮನಸ್ಸಿನ ಮೆಟ್ಟಿಲುಗಳು

ಮನುಷ್ಯನ ಜೀವನವು ಹೊರಗಿನ ಸಾಧನೆಗಳಿಂದ ಮಾತ್ರ ರೂಪುಗೊಳ್ಳುವುದಿಲ್ಲ. ಅವನ ಮನಸ್ಸಿನೊಳಗೆ ನಡೆಯುವ ಚಿಂತನೆಗಳು, ಭಾವನೆಗಳು, ನಿರ್ಧಾರಗಳು ಮತ್ತು ಅನುಭವಗಳೇ ಅವನ ಬದುಕಿನ ನಿಜವಾದ ದಿಕ್ಕನ್ನು ನಿರ್ಧರಿಸುತ್ತವೆ. ಮನಸ್ಸು ಒಂದು ಅದ್ಭುತ ಲೋಕ. ಅದು ಕೆಲವೊಮ್ಮೆ ಹೂವಿನಂತೆ ಮೃದುವಾಗಿರುತ್ತದೆ, ಮತ್ತೆ ಕೆಲವೊಮ್ಮೆ ಬಂಡೆಯಂತೆ ಗಟ್ಟಿಯಾಗಿರುತ್ತದೆ. ಈ ಮನಸ್ಸು ಜೀವನದ ವಿವಿಧ ಹಂತಗಳಲ್ಲಿ ಹಲವು ಮೆಟ್ಟಿಲುಗಳನ್ನು ಏರುತ್ತಾ ಸಾಗುತ್ತದೆ. ಆ ಮೆಟ್ಟಿಲುಗಳೇ ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುತ್ತವೆ.

ಮಗು ಜನಿಸಿದಾಗ ಅದರ ಮನಸ್ಸು ಖಾಲಿ ಹಾಳೆಯಂತಿರುತ್ತದೆ. ಅದು ನೋಡಿದುದನ್ನು, ಕೇಳಿದುದನ್ನು, ಅನುಭವಿಸಿದುದನ್ನು ತನ್ನೊಳಗೆ ಸಂಗ್ರಹಿಸಿಕೊಳ್ಳುತ್ತದೆ. ಪ್ರೀತಿ, ಮಮತೆ, ಕಾಳಜಿ ಇವುಗಳು ಅದರ ಮನಸ್ಸಿನ ಮೊದಲ ಮೆಟ್ಟಿಲುಗಳಾಗುತ್ತವೆ. ತಾಯಿ ಮುದ್ದಾಡಿದಾಗ, ತಂದೆ ಕೈಹಿಡಿದು ನಡೆಸಿದಾಗ, ಮನೆಯವರು ಪ್ರೋತ್ಸಾಹಿಸಿದಾಗ ಮನಸ್ಸಿನ ಮೊದಲ ಮೆಟ್ಟಿಲು ಬಲವಾಗುತ್ತದೆ. ಈ ಮೆಟ್ಟಿಲು ಗಟ್ಟಿಯಾಗಿದ್ದರೆ ಮುಂದಿನ ಬದುಕಿನ ಹಾದಿಯೂ ಸುಗಮವಾಗುತ್ತದೆ.

ಬೆಳೆದಂತೆ ಮನಸ್ಸು ಹೊಸ ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸುತ್ತದೆ. ನಾನು ಯಾರು?, ನನ್ನ ಸಾಮರ್ಥ್ಯ ಏನು?, ನನ್ನ ಗುರಿ ಯಾವುದು? ಎಂಬ ಪ್ರಶ್ನೆಗಳು ಮೂಡುತ್ತವೆ. ಈ ಪ್ರಶ್ನೆಗಳೇ ಆತ್ಮಶೋಧನೆಯ ಮೆಟ್ಟಿಲುಗಳು. ಪ್ರತಿಯೊಬ್ಬರೂ ಜೀವನದಲ್ಲಿ ಒಮ್ಮೆ ತಮ್ಮನ್ನು ತಾವು ಅರಿಯಲು ಪ್ರಯತ್ನಿಸುತ್ತಾರೆ. ಕೆಲವರು ಬೇಗನೆ ತಮ್ಮ ದಾರಿಯನ್ನು ಕಂಡುಕೊಳ್ಳುತ್ತಾರೆ. ಇನ್ನೂ ಕೆಲವರು ಹಲವು ತಿರುವುಗಳನ್ನು ದಾಟಿ ತಮ್ಮ ಗುರಿಯನ್ನು ತಲುಪುತ್ತಾರೆ. ಆದರೆ ಹುಡುಕಾಟ ನಿಂತರೆ ಬೆಳವಣಿಗೆ ನಿಲ್ಲುತ್ತದೆ.

ಮನಸ್ಸಿನ ಮತ್ತೊಂದು ಪ್ರಮುಖ ಮೆಟ್ಟಿಲು ಆತ್ಮವಿಶ್ವಾಸ. ಜೀವನದಲ್ಲಿ ಪ್ರತಿಯೊಬ್ಬರಿಗೂ ಸೋಲುಗಳು ಬರುತ್ತವೆ. ಕೆಲವೊಮ್ಮೆ ಪ್ರಯತ್ನಿಸಿದ ಕೆಲಸ ವಿಫಲವಾಗಬಹುದು. ಕೆಲವೊಮ್ಮೆ ನಿರೀಕ್ಷಿಸಿದವರು ನಮ್ಮನ್ನು ಅರ್ಥಮಾಡಿಕೊಳ್ಳದೇ ಇರಬಹುದು. ಅಂತಹ ಸಂದರ್ಭಗಳಲ್ಲಿ ಮನಸ್ಸು ಕುಗ್ಗುವುದು ಸಹಜ. ಆದರೆ ಸೋಲಿನಲ್ಲಿಯೇ ಮತ್ತೆ ಎದ್ದು ನಿಲ್ಲುವ ಶಕ್ತಿ ಆತ್ಮವಿಶ್ವಾಸದಿಂದ ಬರುತ್ತದೆ. ಬಿದ್ದ ನಂತರ ಎದ್ದು ನಿಲ್ಲುವವನೇ ಜೀವನದ ನಿಜವಾದ ವಿಜೇತ. ಆತ್ಮವಿಶ್ವಾಸ ಎಂಬ ಮೆಟ್ಟಿಲು ಏರಿದಾಗ ಮನಸ್ಸು ಹೊಸ ದಿಕ್ಕುಗಳನ್ನು ಕಾಣುತ್ತದೆ.

ಅನುಭವಗಳು ಮನಸ್ಸಿನ ದೊಡ್ಡ ಗುರುಗಳು. ಪುಸ್ತಕಗಳು ಜ್ಞಾನವನ್ನು ಕೊಡಬಹುದು, ಆದರೆ ಅನುಭವಗಳು ಬದುಕನ್ನು ಕಲಿಸುತ್ತವೆ. ಸಂತೋಷವೂ ಒಂದು ಅನುಭವ, ದುಃಖವೂ ಒಂದು ಅನುಭವ. ಯಶಸ್ಸು ನಮಗೆ ಉತ್ಸಾಹವನ್ನು ನೀಡಿದರೆ, ವೈಫಲ್ಯ ನಮಗೆ ಪಾಠವನ್ನು ಕಲಿಸುತ್ತದೆ. ಪ್ರತಿಯೊಂದು ಅನುಭವವೂ ಮನಸ್ಸಿನ ಒಂದು ಹೊಸ ಮೆಟ್ಟಿಲು. ಆ ಮೆಟ್ಟಿಲುಗಳನ್ನು ಧೈರ್ಯದಿಂದ ಏರಿದಾಗ ವ್ಯಕ್ತಿತ್ವವು ಮತ್ತಷ್ಟು ಪರಿಪಕ್ವವಾಗುತ್ತದೆ.

ಕ್ಷಮೆ ಎಂಬುದು ಮನಸ್ಸಿನ ಅತ್ಯಂತ ಎತ್ತರದ ಮೆಟ್ಟಿಲುಗಳಲ್ಲಿ ಒಂದು. ನಮ್ಮನ್ನು ನೋಯಿಸಿದವರನ್ನು ದ್ವೇಷಿಸುವುದು ಸುಲಭ. ಆದರೆ ಅವರನ್ನು ಕ್ಷಮಿಸುವುದು ದೊಡ್ಡ ಗುಣ. ಕ್ಷಮೆ ಎಂದರೆ ತಪ್ಪನ್ನು ಒಪ್ಪಿಕೊಳ್ಳುವುದು ಅಲ್ಲ; ನಮ್ಮ ಮನಸ್ಸನ್ನು ದ್ವೇಷದ ಬಂಧನದಿಂದ ಮುಕ್ತಗೊಳಿಸುವುದು. ಕ್ಷಮಿಸುವ ಮನಸ್ಸು ಹಗುರವಾಗಿರುತ್ತದೆ. ಅದು ನೆಮ್ಮದಿಯ ಕಡೆಗೆ ಸಾಗುತ್ತದೆ.

ಕೃತಜ್ಞತೆಯೂ ಮನಸ್ಸಿನ ಒಂದು ಅಮೂಲ್ಯ ಮೆಟ್ಟಿಲು.




ನಮಗೆ ಸಹಾಯ ಮಾಡಿದವರನ್ನು, ನಮ್ಮ ಬದುಕಿನಲ್ಲಿ ಬೆಳಕು ತಂದವರನ್ನು ನೆನಪಿಸಿಕೊಳ್ಳುವ ಗುಣ ಕೃತಜ್ಞತೆ. ಇಂದಿನ ವೇಗದ ಜೀವನದಲ್ಲಿ ನಾವು ಪಡೆದದ್ದನ್ನು ಮರೆತು, ಪಡೆಯದದ್ದರ ಬಗ್ಗೆ ಹೆಚ್ಚು ಯೋಚಿಸುತ್ತೇವೆ. ಆದರೆ ಒಂದು ಕ್ಷಣ ನಿಂತು ನೋಡಿದರೆ ನಮ್ಮ ಬದುಕಿನಲ್ಲಿ ಎಷ್ಟೋ ಆಶೀರ್ವಾದಗಳಿವೆ ಎಂಬುದು ಅರಿವಾಗುತ್ತದೆ. ಕೃತಜ್ಞತೆಯ ಮನಸ್ಸು ಯಾವಾಗಲೂ ಸಂತೋಷದತ್ತ ಹೆಜ್ಜೆ ಇಡುತ್ತದೆ.

ಸಹಾನುಭೂತಿ ಮತ್ತು ಮಾನವೀಯತೆ ಮನಸ್ಸಿನ ಮತ್ತಷ್ಟು ಉನ್ನತ ಮೆಟ್ಟಿಲುಗಳು. ನಮ್ಮ ನೋವನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ. ಆದರೆ ಇತರರ ನೋವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ ಮನಸ್ಸು ವಿಶಾಲವಾಗುತ್ತದೆ. ಒಬ್ಬರ ಕಣ್ಣೀರನ್ನು ಒರೆಸುವುದು, ಸಂಕಷ್ಟದಲ್ಲಿರುವವರಿಗೆ ನೆರವಾಗುವುದು, ಒಂದು ಸಾಂತ್ವನದ ಮಾತು ಹೇಳುವುದು ಇವುಗಳೆಲ್ಲ ಮಾನವೀಯತೆಯ ಪ್ರತೀಕಗಳು. ಇಂತಹ ಗುಣಗಳು ಮನಸ್ಸನ್ನು ಇನ್ನಷ್ಟು ಶ್ರೀಮಂತಗೊಳಿಸುತ್ತವೆ.

ಮನಸ್ಸಿನ ಕೊನೆಯ ಮತ್ತು ಅತ್ಯುನ್ನತ ಮೆಟ್ಟಿಲು ಆತ್ಮತೃಪ್ತಿ. ಜೀವನದಲ್ಲಿ ಎಲ್ಲವನ್ನೂ ಪಡೆಯುವುದು ಸಾಧ್ಯವಿಲ್ಲ. ಆದರೆ ಪಡೆದದ್ದರಲ್ಲಿ ಸಂತೋಷ ಕಂಡುಕೊಳ್ಳುವುದು ಸಾಧ್ಯ. ಆತ್ಮತೃಪ್ತಿ ಎಂದರೆ ಆಸೆಗಳನ್ನು ಕೊಲ್ಲುವುದು ಅಲ್ಲ; ಆಸೆಗಳಿಗೆ ಮಿತಿ ಹಾಕುವುದು. ತನ್ನ ಶಕ್ತಿಯನ್ನು ಅರಿತು, ತನ್ನ ಪ್ರಯತ್ನವನ್ನು ಗೌರವಿಸಿ, ತನ್ನ ಬದುಕಿನ ಮೌಲ್ಯವನ್ನು ತಿಳಿದು ಬದುಕುವವನು ನಿಜವಾದ ಸಂತೋಷವನ್ನು ಅನುಭವಿಸುತ್ತಾನೆ.

ಮನಸ್ಸು ಒಂದು ದೊಡ್ಡ ಕಟ್ಟಡವಿದ್ದರೆ, ಅದರ ಪ್ರತಿಯೊಂದು ಮೆಟ್ಟಿಲು ಒಂದು ಜೀವನ ಪಾಠ. ಪ್ರೀತಿ, ಆತ್ಮಶೋಧನೆ, ಆತ್ಮವಿಶ್ವಾಸ, ಅನುಭವ, ಕ್ಷಮೆ, ಕೃತಜ್ಞತೆ, ಸಹಾನುಭೂತಿ ಮತ್ತು ಆತ್ಮತೃಪ್ತಿ ಇವುಗಳೆಲ್ಲ ಮನಸ್ಸಿನ ಮೆಟ್ಟಿಲುಗಳು. ಈ ಮೆಟ್ಟಿಲುಗಳನ್ನು ಒಂದೊಂದಾಗಿ ಏರಿದಾಗ ಮನುಷ್ಯನು ಕೇವಲ ಯಶಸ್ವಿಯಾಗುವುದಲ್ಲ, ಉತ್ತಮ ವ್ಯಕ್ತಿಯಾಗಿಯೂ ರೂಪುಗೊಳ್ಳುತ್ತಾನೆ.

ಜೀವನದ ನಿಜವಾದ ಎತ್ತರವು ನಾವು ಎಷ್ಟು ಮಹಡಿಗಳನ್ನು ಏರಿದ್ದೇವೆ ಎಂಬುದರಲ್ಲಿ ಇಲ್ಲ; ನಮ್ಮ ಮನಸ್ಸು ಎಷ್ಟು ಮೆಟ್ಟಿಲುಗಳನ್ನು ಏರಿದೆ ಎಂಬುದರಲ್ಲಿ ಅಡಗಿದೆ. ಮನಸ್ಸು ಬೆಳೆಯುತ್ತಿದ್ದಂತೆ ಬದುಕು ಸುಂದರವಾಗುತ್ತದೆ, ಬದುಕು ಸುಂದರವಾದಂತೆ ಜಗತ್ತೂ ಸುಂದರವಾಗಿ ಕಾಣುತ್ತದೆ.

ಮನಸ್ಸಿನ ಮೆಟ್ಟಿಲುಗಳನ್ನು ಏರಿದಷ್ಟೂ ಜೀವನದ ಅರ್ಥ ಸ್ಪಷ್ಟವಾಗುತ್ತದೆ; ಎತ್ತರಕ್ಕೇರಿದಷ್ಟೂ ಮನುಷ್ಯನೊಳಗಿನ ಮಾನವೀಯತೆ ಇನ್ನಷ್ಟು ಅರಳುತ್ತದೆ. ಬದುಕಿನ ನಿಜವಾದ ಗೆಲುವು ಹೊರಗಿನ ಶಿಖರ ತಲುಪುವುದಲ್ಲ, ಒಳಗಿನ ಮನಸ್ಸನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದಾಗಿದೆ.

– ಶ್ರೀ ಸುಬ್ರಹ್ಮಣ್ಯ ನಾಯಕ್.

# ವಿಜಯಪುರದ ಗೋಲ್ ಗುಂಬಜ್

ಕರ್ನಾಟಕದ ವಿಜಯಪುರ (ಹಿಂದಿನ ಬಿಜಾಪುರ) ನಗರದಲ್ಲಿರುವ ಅತ್ಯಂತ ಪ್ರಸಿದ್ಧ ಐತಿಹಾಸಿಕ ಸ್ಮಾರಕವಾಗಿದೆ. ಇದು ಆದಿಲ್ ಶಾಹಿ ವಂಶದ ಏಳನೇ ಸುಲ್ತಾನನಾದ ಮೊಹಮ್ಮದ್ ಆದಿಲ್ ಶಾ ಅವರ ಸಮಾಧಿಯಾಗಿದೆ. ತನ್ನ ಭವ್ಯತೆ, ವಿಶಿಷ್ಟ ವಾಸ್ತುಶಿಲ್ಪ ಮತ್ತು ಅದ್ಭುತ ಧ್ವನಿ ಪ್ರತಿಧ್ವನಿಯ ಕಾರಣದಿಂದಾಗಿ ಗೋಲ್ ಗುಂಬಜ್ ವಿಶ್ವದಾದ್ಯಂತ ಪ್ರಸಿದ್ಧಿ ಪಡೆದಿದೆ. ಕರ್ನಾಟಕದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಇದೂ ಒಂದಾಗಿದ್ದು, ಪ್ರತಿವರ್ಷ ಸಾವಿರಾರು ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ.

ಹೆಸರಿನ ಅರ್ಥ – ಗೋಲ್ ಎಂಬ ಪದವು ಪರ್ಷಿಯನ್ ಭಾಷೆಯಲ್ಲಿ ದುಂಡಾದ ಅಥವಾ ವೃತ್ತಾಕಾರದ ಎಂಬ ಅರ್ಥವನ್ನು ಸೂಚಿಸುತ್ತದೆ. ಗುಂಬಜ್ ಎಂದರೆ ಗುಮ್ಮಟ ಅಥವಾ ಗೋಪುರಾಕಾರದ ಮೇಲ್ಛಾವಣಿ. ಆದ್ದರಿಂದ ಗೋಲ್ ಗುಂಬಜ್ ಎಂದರೆ ದುಂಡಾದ ಗುಮ್ಮಟವನ್ನು ಹೊಂದಿರುವ ಕಟ್ಟಡ ಎಂಬ ಅರ್ಥ ಬರುತ್ತದೆ.

**ಗುಂನಜ್ ಇತಿಹಾಸ:** ಮೊಹಮ್ಮದ್ ಆದಿಲ್ ಶಾ ಅವರು ತಮ್ಮ ಸಮಾಧಿಗಾಗಿ ಈ ಭವ್ಯ ಕಟ್ಟಡವನ್ನು ನಿರ್ಮಿಸಲು ನಿರ್ಧರಿಸಿದರು. ಕ್ರಿ.ಶ. 1626ರಲ್ಲಿ ಇದರ ನಿರ್ಮಾಣ ಕಾರ್ಯ ಆರಂಭಗೊಂಡು ಸುಮಾರು 1656ರಲ್ಲಿ ಪೂರ್ಣಗೊಂಡಿತು. ಈ ಕಟ್ಟಡವನ್ನು ಪ್ರಸಿದ್ಧ ವಾಸ್ತುಶಿಲ್ಪಿ ಯಾಕೂತ್ ದಬೂಲ್ ವಿನ್ಯಾಸಗೊಳಿಸಿದ್ದಾನೆ ಎಂದು ಇತಿಹಾಸಕಾರರು ಹೇಳುತ್ತಾರೆ.

ಆದಿಲ್ ಶಾಹಿ ವಂಶವು ವಿಜಯಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಕಲೆ, ಸಾಹಿತ್ಯ, ಸಂಗೀತ ಹಾಗೂ ವಾಸ್ತುಶಿಲ್ಪಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿತ್ತು. ಗೋಲ್ ಗುಂಬಜ್ ಆ ಕಾಲದ ಕಲಾತ್ಮಕತೆ ಮತ್ತು ತಾಂತ್ರಿಕ ಜ್ಞಾನದ ಅದ್ಭುತ ನಿದರ್ಶನವಾಗಿದೆ.

**ಗುಂಜ ವಾಸ್ತುಶಿಲ್ಪದ ವೈಶಿಷ್ಟ್ಯಗಳು:** ಗೋಲ್ ಗುಂಬಜ್ ವಿಶ್ವದ ಅತಿದೊಡ್ಡ ಸ್ವತಂತ್ರ ಗುಮ್ಮಟಗಳಲ್ಲಿ ಒಂದಾಗಿದೆ. ಇದರ ಗುಮ್ಮಟವು ಸುಮಾರು 44 ಮೀಟರ್ ವ್ಯಾಸವನ್ನು ಹೊಂದಿದ್ದು ಯಾವುದೇ ಮಧ್ಯದ ಕಂಬಗಳಿಲ್ಲದೆ ನಿರ್ಮಾಣಗೊಂಡಿದೆ. ಕಟ್ಟಡವು ಚೌಕಾಕಾರದ ಅಡಿಪಾಯದ ಮೇಲೆ ನಿರ್ಮಾಣವಾಗಿದ್ದು ನಾಲ್ಕು ಮೂಲೆಗಳಲ್ಲಿ ಏಳು ಅಂತಸ್ತುಗಳ ಎತ್ತರದ ಗೋಪುರಗಳಿವೆ. ಈ ಗೋಪುರಗಳಿಗೆ ಸುರುಳಿಯಾಕಾರದ ಮೆಟ್ಟಿಲುಗಳ ಮೂಲಕ ಏರಬಹುದು. ಮಧ್ಯದಲ್ಲಿರುವ ವಿಶಾಲವಾದ ಗುಮ್ಮಟವು ಅದು ಕಟ್ಟಡದ ಮುಖ್ಯ ಆಕರ್ಷಣೆಯಾಗಿದೆ. ಕಟ್ಟಡದ ಒಳಭಾಗವು ವಿಶಾಲ ಸಭಾಂಗಣದಂತೆ ಕಾಣುತ್ತದೆ. ಯಾವುದೇ ಆಧಾರ ಕಂಬಗಳಿಲ್ಲದೆ ಇಷ್ಟು ದೊಡ್ಡ ವಿಸ್ತಾರವನ್ನು ನಿರ್ಮಿಸಿರುವುದು ಆ ಕಾಲದ ವಾಸ್ತುಶಿಲ್ಪಿಗಳ ಪ್ರತಿಭೆಗೆ ಸಾಕ್ಷಿಯಾಗಿದೆ.

**ಪ್ರವಾಸಿಗರ ಆಕರ್ಷಣೆಗಳು :**

- ವಿಶ್ವಪ್ರಸಿದ್ಧ ವಿಶ್ವರಿಂಗ್ ಗ್ಯಾಲರಿ
- ಭವ್ಯವಾದ ಗುಮ್ಮಟ
- ಐತಿಹಾಸಿಕ ಸಮಾಧಿ
- ಅದ್ಭುತ ಇಸ್ಲಾಮಿಕ್ ವಾಸ್ತುಶಿಲ್ಪ
- ಸುಂದರ ಉದ್ಯಾನವನ
- ಛಾಯಾಗ್ರಹಣಕ್ಕೆ ಉತ್ತಮ ಸ್ಥಳ

**ಗುಂಬಜ್ ವಿಶ್ವರಿಂಗ್ ಗ್ಯಾಲರಿ:** ಗೋಲ್ ಗುಂಬಜ್‌ನ ಅತ್ಯಂತ ವಿಶೇಷ ಆಕರ್ಷಣೆ ವಿಶ್ವರಿಂಗ್ ಗ್ಯಾಲರಿ. ಗುಮ್ಮಟದ ಒಳಭಾಗದಲ್ಲಿರುವ ಈ ಗ್ಯಾಲರಿಯಲ್ಲಿ ಒಬ್ಬ ವ್ಯಕ್ತಿ ಒಂದು ತುದಿಯಲ್ಲಿ ನಿಧಾನವಾಗಿ ಮಾತನಾಡಿದರೂ ಮತ್ತೊಂದು ತುದಿಯಲ್ಲಿ ನಿಂತಿರುವ ವ್ಯಕ್ತಿಗೆ ಸ್ಪಷ್ಟವಾಗಿ ಕೇಳಿಸುತ್ತದೆ. ಒಂದು ಚಪ್ಪಾಳೆಯ ಶಬ್ದವು ಹಲವಾರು ಬಾರಿ ಪ್ರತಿಧ್ವನಿಸುತ್ತದೆ. ಈ ವಿಶಿಷ್ಟ ಧ್ವನಿ ವ್ಯವಸ್ಥೆ ಪ್ರವಾಸಿಗರನ್ನು ಆಶ್ಚರ್ಯಗೊಳಿಸುತ್ತದೆ. ವಿಜ್ಞಾನ ಮತ್ತು ವಾಸ್ತುಶಿಲ್ಪದ ಸಮನ್ವಯದ ಅತ್ಯುತ್ತಮ ಉದಾಹರಣೆಯಾಗಿ ಇದು ಪರಿಗಣಿಸಲ್ಪಟ್ಟಿದೆ.

**ಪರಿಸರ ಮತ್ತು ಉದ್ಯಾನವನ:** ಗೋಲ್ ಗುಂಬಜ್ ಸುತ್ತಲೂ ಸುಂದರವಾದ ಉದ್ಯಾನವನವಿದೆ. ಹಸಿರು ಹುಲ್ಲುಗಾವಲುಗಳು, ಹೂವಿನ ಗಿಡಗಳು ಮತ್ತು ವಿಶಾಲವಾದ ಪ್ರಾಂಗಣವು ಪ್ರವಾಸಿಗರಿಗೆ ಆಹ್ಲಾದಕರ ವಾತಾವರಣವನ್ನು ಒದಗಿಸುತ್ತದೆ. ಸಂಜೆ ವೇಳೆಯಲ್ಲಿ ಕಟ್ಟಡದ ಸೌಂದರ್ಯ ಇನ್ನಷ್ಟು ಮನಮೋಹಕವಾಗಿ ಕಾಣುತ್ತದೆ.

ಗೋಲ್ ಗುಂಬಜ್‌ಗೆ ಭೇಟಿ ನೀಡಿದಾಗ ಇತಿಹಾಸ, ಕಲೆ ಮತ್ತು ವಿಜ್ಞಾನದ ಅಪೂರ್ವ ಸಂಗಮವನ್ನು ಕಾಣಬಹುದು. ಕಟ್ಟಡದ ಮೇಲ್ಭಾಗಕ್ಕೆ ಏರಿ ನೋಡಿದರೆ ವಿಜಯಪುರ ನಗರದ ಸುಂದರ ನೋಟ ಕಾಣಿಸುತ್ತದೆ. ಪ್ರತಿಧ್ವನಿ ಗ್ಯಾಲರಿಯ ಅನುಭವ ಪ್ರವಾಸಿಗರ ಮನಸ್ಸಿನಲ್ಲಿ ಶಾಶ್ವತ ನೆನಪಾಗಿ ಉಳಿಯುತ್ತದೆ.



ಗೋಲ್ ಗುಂಬಜ್ ಕೇವಲ ಒಂದು ಸಮಾಧಿಯಲ್ಲ; ಅದು ಭಾರತದ ವಾಸ್ತುಶಿಲ್ಪದ ಅದ್ಭುತ ಸಾಧನೆಯಾಗಿದೆ. ಆದಿಲ್ ಶಾಹಿ ವಂಶದ ವೈಭವ, ಕಲಾತ್ಮಕತೆ ಮತ್ತು ತಾಂತ್ರಿಕ ಕೌಶಲ್ಯದ ಪ್ರತೀಕವಾಗಿರುವ ಈ ಸ್ಮಾರಕವು ಕರ್ನಾಟಕದ ಹೆಮ್ಮೆಯ ಪ್ರವಾಸಿ ತಾಣವಾಗಿದೆ. ಇತಿಹಾಸ, ವಾಸ್ತುಶಿಲ್ಪ ಮತ್ತು ಪ್ರವಾಸೋದ್ಯಮದಲ್ಲಿ ಆಸಕ್ತಿ ಹೊಂದಿರುವ ಪ್ರತಿಯೊಬ್ಬರೂ ಜೀವನದಲ್ಲಿ ಒಮ್ಮೆಯಾದರೂ ಗೋಲ್ ಗುಂಬಜ್‌ಗೆ ಭೇಟಿ ನೀಡಬೇಕು.

– ರಮೇಶ ನಾಯ್ಕ,
ಉಪ್ಪುಂದ, ಬೈಂದೂರು

# ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪೋಷಕರ ಜವಾಬ್ದಾರಿ

ಜ್ಞಾನಜ್ಯೋತಿ ಮಕ್ಕಳು ಒಂದು ಕುಟುಂಬದ ಅಮೂಲ್ಯ ಆಸ್ತಿ ಮಾತ್ರವಲ್ಲ, ಸಮಾಜ ಮತ್ತು ರಾಷ್ಟ್ರದ ಭವಿಷ್ಯದ ನಿರ್ಮಾತೃಗಳೂ ಆಗಿದ್ದಾರೆ. ಮಗುವಿನ ವ್ಯಕ್ತಿತ್ವ, ನಡತೆ, ಶಿಕ್ಷಣ ಮತ್ತು ಜೀವನ ಮೌಲ್ಯಗಳ ಅಡಿಪಾಯ ರೂಪಿಸುವಲ್ಲಿ ಪೋಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಶಾಲೆಯು ಮಗುವಿಗೆ ಶಿಕ್ಷಣ ನೀಡಬಹುದು, ಆದರೆ ಜೀವನದ ಮೊದಲ ಪಾಠಗಳನ್ನು ಕಲಿಸುವುದು ಪೋಷಕರೇ. ಆದ್ದರಿಂದ ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಜವಾಬ್ದಾರಿ ಅಪಾರ.


ಮಗುವಿನ ಜೀವನದ ಮೊದಲ ಗುರುಗಳು ತಂದೆ-ತಾಯಿಯೇ ಆಗಿದ್ದಾರೆ. ಮಕ್ಕಳು, ಪೋಷಕರು ಮಾತನಾಡುವ ರೀತಿ, ವರ್ತಿಸುವ ವಿಧಾನ ಮತ್ತು ಜೀವನಶೈಲಿಯನ್ನು ಗಮನಿಸಿ ಕಲಿಯುತ್ತಾರೆ. ಆದ್ದರಿಂದ ಪೋಷಕರು ತಮ್ಮ ಮಕ್ಕಳ ಮುಂದೆ ಉತ್ತಮ ಮಾದರಿಯಾಗಬೇಕು.

ಪ್ರಾಮಾಣಿಕತೆ, ಶಿಸ್ತು, ಗೌರವ, ಸಹಾನುಭೂತಿ ಮತ್ತು ಮಾನವೀಯತೆಯಂತಹ ಮೌಲ್ಯಗಳನ್ನು ಮಾತಿನ ಮೂಲಕ ಮಾತ್ರವಲ್ಲ, ತಮ್ಮ ನಡೆ-ನುಡಿಗಳ ಮೂಲಕವೂ ಮಕ್ಕಳಿಗೆ ಕಲಿಸಬೇಕು. ಶಿಕ್ಷಣದ ವಿಷಯದಲ್ಲಿ ಪೋಷಕರ ಪಾತ್ರ ಅತ್ಯಂತ ಪ್ರಮುಖ. ಮಕ್ಕಳನ್ನು ಶಾಲೆಗೆ ಕಳುಹಿಸುವುದಷ್ಟೇ ಪೋಷಕರ ಕರ್ತವ್ಯವಲ್ಲ. ಅವರ ಕಲಿಕೆಯ ಪ್ರಗತಿಯನ್ನು ಗಮನಿಸುವುದು, ಶಿಕ್ಷಕರೊಂದಿಗೆ ನಿರಂತರ ಸಂಪರ್ಕದಲ್ಲಿರುವುದು ಮತ್ತು ಮನೆಯಲ್ಲಿಯೇ ಓದಲು ಸೂಕ್ತ ವಾತಾವರಣವನ್ನು ಕಲ್ಪಿಸುವುದು ಸಹ ಅಗತ್ಯವಾಗಿದೆ.

ಮಕ್ಕಳ ಮೇಲೆ ಅತಿಯಾದ ಒತ್ತಡ ಹೇರುವುದು ಸರಿಯಲ್ಲ; ಅವರ ಆಸಕ್ತಿ ಮತ್ತು ಸಾಮರ್ಥ್ಯವನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ಇಂದಿನ ತಂತ್ರಜ್ಞಾನದ ಯುಗದಲ್ಲಿ ಮಕ್ಕಳ ಮೇಲೆ ಮೊಬೈಲ್, ದೂರದರ್ಶನ ಮತ್ತು ಸಾಮಾಜಿಕ ಜಾಲತಾಣಗಳ ಪ್ರಭಾವ ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲಿ ಮಕ್ಕಳ ಡಿಜಿಟಲ್ ಬಳಕೆಯನ್ನು ನಿಯಂತ್ರಿಸುವ ಜವಾಬ್ದಾರಿ ಪೋಷಕರ ಮೇಲಿದೆ. ತಂತ್ರಜ್ಞಾನವನ್ನು ಶಿಕ್ಷಣ ಮತ್ತು ಜ್ಞಾನವೃದ್ಧಿಗೆ ಬಳಸುವಂತೆ ಮಾರ್ಗದರ್ಶನ ನೀಡಬೇಕು. ಅನಗತ್ಯ ವಿಷಯಗಳಿಂದ ಮಕ್ಕಳನ್ನು ದೂರವಿಡಲು ಎಚ್ಚರಿಕೆ ವಹಿಸಬೇಕು.

ಮಕ್ಕಳ ಮಾನಸಿಕ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಸಹ ಪೋಷಕರ ಪ್ರಮುಖ ಜವಾಬ್ದಾರಿಯಾಗಿದೆ. ಕೆಲವೊಮ್ಮೆ ಮಕ್ಕಳು ತಮ್ಮ ಭಯ, ಸಮಸ್ಯೆ ಅಥವಾ ಭಾವನೆಗಳನ್ನು ವ್ಯಕ್ತಪಡಿಸಲು ಹಿಂಜರಿಯಬಹುದು. ಪೋಷಕರು ಮಕ್ಕಳೊಂದಿಗೆ ಸ್ನೇಹಪರವಾಗಿ ಮಾತನಾಡಿ, ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು.

ತಪ್ಪು ಮಾಡಿದಾಗ ಕೇವಲ ಶಿಕ್ಷಿಸುವ ಬದಲು ಅದರ ಪರಿಣಾಮವನ್ನು ತಿಳಿಸಿ ತಿದ್ದುವ ಪ್ರಯತ್ನ ಮಾಡಬೇಕು. ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬೆಳೆಯಲು ಮಕ್ಕಳಿಗೆ ಸಾಮಾಜಿಕ ಜವಾಬ್ದಾರಿಗಳ ಅರಿವು ಮೂಡಿಸಬೇಕು. ಹಿರಿಯರನ್ನು ಗೌರವಿಸುವುದು, ಪರಿಸರದ ಬಗ್ಗೆ ಕಾಳಜಿ ವಹಿಸುವುದು, ಸಹಾಯ ಮಾಡುವ ಮನೋಭಾವ ಬೆಳೆಸುವುದು ಮತ್ತು ಸಮಾಜದ ಬಗ್ಗೆ ಜವಾಬ್ದಾರಿಯುತ ದೃಷ್ಟಿಕೋನವನ್ನು ಬೆಳೆಸುವುದು ಪೋಷಕರ ಕರ್ತವ್ಯ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಅನೇಕ ಪೋಷಕರು ಮಕ್ಕಳಿಂದ ಅತಿಯಾದ ನಿರೀಕ್ಷೆ ಇಟ್ಟು ಕೊಳ್ಳುತ್ತಾರೆ. ಆದರೆ ಪ್ರತಿಯೊಂದು ಮಗುವಿನ ಸಾಮರ್ಥ್ಯ ಮತ್ತು ಆಸಕ್ತಿ ವಿಭಿನ್ನವಾಗಿರುತ್ತದೆ ಎಂಬುದನ್ನು ಅರಿಯಬೇಕು. ಮಕ್ಕಳ ಕನಸುಗಳನ್ನು ಗೌರವಿಸಿ, ಅವರ ಪ್ರತಿಭೆಯನ್ನು ಗುರುತಿಸಿ ಬೆಂಬಲ ನೀಡುವುದು ಮುಖ್ಯ. ಹೋಲಿಕೆ ಮಾಡುವುದರಿಂದ ಆತ್ಮವಿಶ್ವಾಸ ಕುಗ್ಗುತ್ತದೆ; ಪ್ರೋತ್ಸಾಹಿಸುವುದರಿಂದ ಸಾಧನೆಗೆ ಪ್ರೇರಣೆ



ದೊರೆಯುತ್ತದೆ.

ಕೊನೆಯಲ್ಲಿ, ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪೋಷಕರ ಪಾತ್ರವನ್ನು ಯಾವುದೂ ಬದಲಾಯಿಸಲು ಸಾಧ್ಯವಿಲ್ಲ. ಪ್ರೀತಿ, ಕಾಳಜಿ, ಮಾರ್ಗದರ್ಶನ ಮತ್ತು ಉತ್ತಮ ಮೌಲ್ಯಗಳ ಮೂಲಕ ಪೋಷಕರು ಮಕ್ಕಳ ಬದುಕನ್ನು ಬೆಳಗಿಸಬಹುದು. ಉತ್ತಮ ಪೋಷಕರು ಉತ್ತಮ ಮಕ್ಕಳನ್ನು ರೂಪಿಸುತ್ತಾರೆ; ಉತ್ತಮ ಮಕ್ಕಳು ಉತ್ತಮ ಸಮಾಜವನ್ನು ನಿರ್ಮಿಸುತ್ತಾರೆ. ಆದ್ದರಿಂದ ಮಕ್ಕಳ ಬೆಳವಣಿಗೆಯನ್ನು ಕೇವಲ ಕುಟುಂಬದ ಜವಾಬ್ದಾರಿಯೆಂದು ಅಲ್ಲ, ಸಮಾಜದ ಭವಿಷ್ಯದ ಹೂಡಿಕೆಯೆಂದು ಪರಿಗಣಿಸಬೇಕು.

– ಶಿವಯೋಗಿ ಎಂ.ವಿ.

# ಕರ್ತವ್ಯ ಆ್ಯಪ್ ಮೂಲಕ ಹಾಜರಾತಿ ಕಡ್ಡಾಯ

## ಸರ್ಕಾರಿ ಕಚೇರಿಗಳಲ್ಲಿ ಲಂಚ ಮುಕ್ತ ಕಚೇರಿ ಎಂದು ಫಲಕ ಅಳವಡಿಸಿ | ಜಿಲ್ಲಾಧಿಕಾರಿ ಲತಾಕುಮಾರಿ ಸೂಚನೆ

• ಪ್ರಜೋದಯ ವರದಿ




**ಹಾಸನ:** ಸರ್ಕಾರಿ ಕಚೇರಿಗಳ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಪ್ರತಿದಿನ ಬೆಳಿಗ್ಗೆ 10 ಗಂಟೆಗೆ ಕಚೇರಿಗೆ ಹಾಜರಾಗಿ ಕರ್ತವ್ಯ ಆ್ಯಪ್ ಮೂಲಕ ಹಾಜರಾತಿ ಕಡ್ಡಾಯವಾಗಿ ಹಾಕಬೇಕು ಮತ್ತು ಕೇಂದ್ರ ಸ್ಥಾನದಲ್ಲಿ ವಾಸವಿರಬೇಕು ಎಂದು ಜಿಲ್ಲಾಧಿಕಾರಿ ಲತಾಕುಮಾರಿ ಅವರು ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಪ್ರತಿ ಸರ್ಕಾರಿ ಕಚೇರಿಗಳಲ್ಲಿ ಲಂಚ ಮುಕ್ತ ಕಚೇರಿ ಎಂದು ಫಲಕ ಅಳವಡಿಸುವುದರ ಜೊತೆಗೆ ನೋಡಲ್ ಅಧಿಕಾರಿ ನೇಮಕ ಮಾಡಬೇಕು ಮೊಬೈಲ್ ನಂಬರ್ ಹಾಕಬೇಕು, ಯಾವುದೇ ದೂರು ಬಂದಲ್ಲಿಗಂಭೀರವಾಗಿ ಪರಿಗಣಿಸಲಾಗುವುದು ಎಂದು ತಿಳಿಸಿದರು.

ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಪ್ರತಿ ಮಾಹೆಯ ಮೊದಲ ಶನಿವಾರ ತಾಲ್ಲೂಕು ಮಟ್ಟದಲ್ಲಿ, ಮೂರನೇ ಶನಿವಾರ ಜಿಲ್ಲಾ ಮಟ್ಟದಲ್ಲಿ ಜನಸ್ಪಂದನ ಕಾರ್ಯಕ್ರಮ ನಡೆಸಲಾಗುತ್ತಿದೆ ಇನ್ನೂ ಮುಂದೆ ಪ್ರತಿ ಮಾಹೆಯಲ್ಲಿ ಒಂದು ದಿನ ಗ್ರಾಮ ಮಟ್ಟದಲ್ಲಿ ಜನಸ್ಪಂದನ ಕಾರ್ಯಕ್ರಮ ನಡೆಸುವ ಮೂಲಕ ಸಮಸ್ಯೆಗಳನ್ನು ಅವಲೋಕಿಸಿ ಪರಿಹಾರಕ್ಕೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಅವರು ನಿರ್ದೇಶನ ನೀಡಿದ್ದಾರೆ ಎಂದು ತಿಳಿಸಿದರು.

ಸರ್ಕಾರಿ ಕಚೇರಿಗಳಲ್ಲಿ ಲಂಚ ಮುಕ್ತ ಕಚೇರಿ ಎಂದು ಫಲಕ ಅಳವಡಿಸುವುದರ ಜೊತೆಗೆ ನೋಡಲ್ ಅಧಿಕಾರಿ ನೇಮಕ ಮಾಡಬೇಕು ಮೊಬೈಲ್ ನಂಬರ್ ಹಾಕಬೇಕು. ಯಾವುದೇ ದೂರು ಬಂದಲ್ಲಿ ಗಂಭೀರವಾಗಿ ಪರಿಗಣಿಸಲಾಗುವುದು. ಸರ್ಕಾರಿ ಕಚೇರಿಗಳಲ್ಲಿ ಗುಟ್ಕಾ, ಮದ್ಯಪಾನ, ಉಗುಳುವುದನ್ನು ನಿಷೇಧಿಸಿದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಲಾಗಿದ್ದು, ಧೂಮಪಾನ ಮಾಡುವುದು ಕಂಡುಬಂದಲ್ಲಿ ದಂಡ ವಿಧಿಸುವುದಲ್ಲದೆ, ಧೂಮಪಾನ ಮುಕ್ತ ಕಚೇರಿ ಎಂದು ಫಲಕ ಅಳವಡಿಸಲು ಸೂಚಿಸಿದರು.

ಜೂ.28 ರಂದು ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆಯವರೆಗೆ ಪಲ್ಸ್ ಪೋಲಿಯೋ ಕಾರ್ಯಕ್ರಮ ನಡೆಯುತ್ತಿದ್ದು, ಎಲ್ಲಾ ಅಧಿಕಾರಿಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸಬೇಕು. ವಲಸೆ ಕಾರ್ಮಿಕರು ಪತ್ತೆ ಹಚ್ಚಿ ಯಾವುದೇ ಮಗುವಿಗೂ ತಪ್ಪಿಹೋಗದಂತೆ ಎಚ್ಚರಿಕೆ ವಹಿಸಬೇಕು ಎಂದರು.

ಹಸಿರು ಹಾಸನ ಕಾರ್ಯಕ್ರಮದಡಿಯಲ್ಲಿ ಎಲ್ಲಾ ಇಲಾಖಾ ಅಧಿಕಾರಿಗಳು ಜೂನ್‌ನಿಂದ ಆಗಸ್ಟ್ ವರೆಗೆ ಗಿಡ ನೆಟ್ಟು ಪೋಷಣೆ ಮಾಡಲು ಪ್ರತಿ ಇಲಾಖೆ ಅಧಿಕಾರಿಗಳು ಕ್ರಮ ವಹಿಸಬೇಕು. ಸರ್ಕಾರಿ ಕಟ್ಟಡಗಳು ವಾಸಿಸಲು ಯೋಗ್ಯವಾಗಿಲ್ಲದಿರುವುದನ್ನು ಗುರುತಿಸಿ ತಾಂತ್ರಿಕವಾಗಿ ಇಂಜಿನಿಯರ್‌ಗಳು ಪರಿಶೀಲನೆ ಮಾಡಿ ಡೆಮಾಲಿಶ್ ಮಾಡಲು ಕ್ರಮವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮೈಕ್ರೋ ಫೈನಾನ್ಸ್, ಚೈನ್ ಲಿಂಕ್ ಹಣಕಾಸು ವ್ಯವಹಾರ ನಡೆಸುವ ಕಂಪನಿಗಳನ್ನು ಗುರುತಿಸಿ ಅವರೊಂದಿಗೆ ಸಭೆ ನಡೆಸಿ ಜೊತೆಗೆ ಸಾರ್ವಜನಿಕರು ತೊಂದರೆಗೆ ಸಿಲುಕದಂತೆ ಅರಿವು ಮೂಡಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಘನತ್ಯಾಜ್ಯವನ್ನು ಸಮರ್ಪಕ ವಿಲೇವಾರಿಗೆ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಬಯೋಮೆಡಿಕಲ್ ವೇಸ್ಟ್‌ಅನ್ನು ಎಲ್ಲೆಂದರಲ್ಲಿ ಹಾಕುತ್ತಿರುವುದು ಕಂಡು ಬರುತ್ತಿದೆ ಇದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ತಿಳಿಸಿದರು.

ಕಲ್ಯಾಣ ಮಂಟಪ, ಆಸ್ಪತ್ರೆ, ಹಾಸ್ಟೆಲ್ ಮತ್ತಿತರ ಕಡೆಗಳಲ್ಲಿ ಬಲ್ಕ್ ಆಗಿ ಉತ್ಪಾದನೆ ಆಗುವ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಹಾಕಿದರೆ ವಿದ್ಯುತ್ ಕಡಿತಗೊಳಿಸುವುದರ ಜೊತೆಗೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಉದ್ಯೋಗ ಮಹಿಳೆಯರಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲು ಪ್ರಸ್ತುತ ಲಭ್ಯವಿರುವ ಕಟ್ಟಡದಲ್ಲಿ ಪ್ರಾರಂಭಿಸಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಅವರು ಸೂಚಿಸಿದರು

ಜಿ.ಪಂ. ಸಿಇಒ ಶುಭಂ ಶುಕ್ಲಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಬ್ ಕುಮಾರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

## ಸಮಾಧಾನ್ ಸಮಾರೋಹ್ ಯಶಸ್ವಿಗೆ ಸೂಚನೆ

**ಬೆಂಗಳೂರು:** ಮಾನ್ಯ ಸರ್ವೋಚ್ಚ ನ್ಯಾಯಾಲಯವು ಆಗಸ್ಟ್ 21 ರಿಂದ 23 ರ ವರೆಗೆ ಹಮ್ಮಿಕೊಂಡಿರುವ ಸಮಾಧಾನ್ ಸಮಾರೋಹ್ (ಲೋಕ್ ಅದಾಲತ್) ಬೃಹತ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರು ರಾಜ್ಯದ ಎಲ್ಲಾ ಇಲಾಖೆಗಳಿಗೆ ಮಹತ್ವದ ನಿರ್ದೇಶನ ನೀಡಿದ್ದಾರೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ (ಕೆ.ಎಸ್.ಎಲ್.ಎಸ್.ಎ) ಸದಸ್ಯ ಕಾರ್ಯದರ್ಶಿಗಳು ಸಲ್ಲಿಸಿರುವ ಮನವಿಯ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯದರ್ಶಿಗಳು ಎಲ್ಲಾ ಇಲಾಖೆಗಳಿಗೆ ಸೂಚಿಸಿರುತ್ತಾರೆ.

ಎಲ್ಲಾ ಇಲಾಖೆಯ ಮುಖ್ಯಸ್ಥರು, ತಮ್ಮ ಇಲಾಖೆಗಳಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ಸರ್ಕಾರಿ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ವಿವಾದಗಳನ್ನು ಉಚಿತ ಲೋಕ್ ಅದಾಲತ್ ಮೂಲಕ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವಂತೆ ತಿಳಿಸಿದ್ದಾರೆ. ಅಲ್ಲದೇ, ಈ ಕುರಿತು ಕೈಗೊಂಡ ಕ್ರಮಗಳ ವರದಿಯನ್ನು 3 ದಿನಗಳ ಒಳಗಾಗಿ ನೇರವಾಗಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಸಲ್ಲಿಸಿ, ಅದರ ಪ್ರತಿಯನ್ನು ಮುಖ್ಯ ಕಾರ್ಯದರ್ಶಿಗಳ ಕಚೇರಿಗೆ ಕಳುಹಿಸಿಕೊಡಬೇಕೆಂದು ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳಿಗೆ ಸೂಚನೆ ನೀಡಲಾಗಿದೆ.

ಕಂದಾಯ ಇಲಾಖೆ, ಕೆ.ಜಿ.ಐ.ಡಿ, ವಿಮಾ ಕಂಪನಿಗಳು, ಪೊಲೀಸ್ ಇಲಾಖೆ, ಖಾಸಗಿ ಕಾರ್ಪೊರೇಷನ್‌ಗಳು ಹಾಗೂ ವಿವಿಧ ಸರ್ಕಾರಿ ಕಚೇರಿಗಳು ಸಹ ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು.

ಈ ಎಲ್ಲಾ ಇಲಾಖೆಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲೂಕು ಕಾನೂನು ಸೇವೆಗಳ ಸಮಿತಿ ಮತ್ತು ಹೈಕೋರ್ಟ್ ಕಾನೂನು ಸೇವೆಗಳ ಸಮಿತಿಗಳೊಂದಿಗೆ ಸಮನ್ವಯ ಸಾಧಿಸಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕು.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳು ಹಾಗೂ ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ನಿರ್ದೇಶನದ ಮೇರೆಗೆ ಈ ಕ್ರಮ ಕೈಗೊಳ್ಳಲಾಗುತ್ತಿದೆ.

## ರೂಪಾಯಿ ಮೌಲ್ಯ ಜಿಗಿತ

• ಪ್ರಜೋದಯ ಏಂದ

ನವದೆಹಲಿ: ನಿರಂತರವಾಗಿ ಅಮೆರಿಕಾದ ಡಾಲರ್ ಎದುರು ಕುಸಿಯುತ್ತಿದ್ದ ಭಾರತದ ರೂಪಾಯಿ ಮೌಲ್ಯದಲ್ಲಿ ಭಾರೀ ಬೆಳವಣಿಗೆ ಆಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆ ಯಲ್ಲಿ ಇತ್ತೀಚಿನ ದಿನಗಳಲ್ಲಿ ಸತತ ಏರಿಳಿತ ಎದುರಿಸುತ್ತಿದ್ದ ಭಾರತೀಯ ರೂಪಾಯಿಗೆ ಈಗ ಜಾಗತಿಕ ರಾಜತಾಂತ್ರಿಕ ಬೆಳವಣಿಗೆಗಳು ಹೊಸ ಚೈತನ್ಯ ತುಂಬಿವೆ.

ಇದೀಗ ಅಮೆರಿಕ ಮತ್ತು ಇರಾನ್ ನಡುವೆ ಏರ್ಪಟ್ಟಿರುವ ಶಾಂತಿ ಒಪ್ಪಂದವು ಜಾಗತಿಕ ವಾಣಿಜ್ಯ ವಲಯದಲ್ಲಿ ಹರ್ಷ ಮೂಡಿಸಿದೆ. ಇದರ ನೇರ ಪರಿಣಾಮವಾಗಿ, ಜೂನ್ 16 ರ ಮಂಗಳವಾರದ ವಹಿವಾಟಿನಲ್ಲಿ ಅಮೆರಿಕನ್ ಡಾಲರ್ ಎದುರು ರೂಪಾಯಿ ಮೌಲ್ಯವು 10 ಪೈಸೆ ಬಲಗೊಂಡು 94.61 ರೂಪಾಯಿ ಮಟ್ಟದಲ್ಲಿ ಆರಂಭವಾಗಿದೆ.

## ಅನೈತಿಕ ಚಟುವಟಿಕೆ: ಇಬ್ಬರ ಬಂಧನ

• ಪ್ರಜೋದಯ ವರದಿ



**ಬೇಲೂರು:** ಪಟ್ಟಣದ ಬಿಕ್ಕೋಡು ರಸ್ತೆಯ ಕಲ್ಯಾಣಿ ಸಮೀಪದಲ್ಲಿರುವ ಆರ್.ಕೆ. ಕಂಫರ್ಟ್ ಲಾಡ್ಜ್‌ನಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತಿದೆ ಎಂಬ ಖಚಿತ ಮಾಹಿತಿಯ ಮೇರೆಗೆ ಪೊಲೀಸರು ದಾಳಿ ನಡೆಸಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನೂ ವಶಕ್ಕೆ ಪಡೆದಿದ್ದಾರೆ.

ಬೇಲೂರು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರೇವಣ್ಣ ಅವರ ನೇತೃತ್ವದ ತಂಡ ಸಂಜೆ ದಾಳಿ ನಡೆಸಿದ್ದು, ಲಾಡ್ಜ್‌ನ ಕೊಠಡಿಗಳನ್ನು ಪರಿಶೀಲನೆ ನಡೆಸಿದೆ. ದಾಳಿಯ ವೇಳೆ ಪುರುಷರು ಹಾಗೂ ಮಹಿಳೆಯರು ಪತ್ತೆಯಾಗಿದ್ದು, ಅವರನ್ನು ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದೆ ಎಂದು ತಿಳಿದು ಬಂದಿದೆ.

ಲಾಡ್ಜ್‌ನ ಕೊಠಡಿ ಸಂಖ್ಯೆ 01ರಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತಿರುವುದು ಕಂಡುಬಂದಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ. ದಾಳಿಯ ಸಂದರ್ಭದಲ್ಲಿ ಹಣ ಹಾಗೂ ಇತರೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಪೊಲೀಸ್ ಸಿಬ್ಬಂದಿಗಳಾದ ಪಿಎಸ್‌ಐ ಶಶಿಕುಮಾರ್, ಎಎಸ್‌ಐ ಸೋಮಶೇಖರ್ ಗೌಡ ಸೇರಿದಂತೆ ಸಿಬ್ಬಂದಿ ಭಾಗವಹಿಸಿದ್ದರು. ಪ್ರಕರಣದ ತನಿಖೆ ಮುಂದುವರಿದಿದೆ.

# ಯೋಗ ಪ್ರತಿಯೊಬ್ಬರ ದೈನಂದಿನ ಜೀವನದ ಭಾಗವಾಗಲಿ

## ಬೇಲೂರಿನಲ್ಲಿ ಅಂತರ್ರಾಷ್ಟ್ರೀಯ ಯೋಗ ದಿನಾಚರಣೆಗೆ ಪೂರ್ವಸಿದ್ಧತೆ: ಜಾಗೃತಿ ಜಾಥಾಗೆ ಶಾಸಕ ಹೆಚ್.ಕೆ.ಸುರೇಶ್ ಚಾಲನೆ

• ಪ್ರಜೋದಯ ವರದಿ




**ಬೇಲೂರು:** 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷ ವಾಕ್ಯದ ಯೋಗ ಜಾಥಾ ಕಾರ್ಯಕ್ರಮಕ್ಕೆ ಮಂಗಳವಾರ ಬೇಲೂರಿನ ಐತಿಹಾಸಿಕ ಶ್ರೀ ಚನ್ನಕೇಶವ ದೇವಸ್ಥಾನದ ಆವರಣದಲ್ಲಿ ಚಾಲನೆ ನೀಡಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಸನ, ಜಿಲ್ಲಾ ಆಯುಷ್ ಇಲಾಖೆ, ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ ಬೇಲೂರು, ಪುರಾತತ್ವ ಇಲಾಖೆ, ಶಾಸಕರ ಕಚೇರಿ ಹಾಗೂ ವಿವಿಧ ಯೋಗ ಸಂಘ-ಸಂಸ್ಥೆಗಳ ಜಂಟಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಜಾಥಾಗೆ ಶಾಸಕ ಹೆಚ್.ಕೆ. ಸುರೇಶ್ ಅವರು ಹಸಿರು ಬಾವುಟ ಬೀಸುವ ಮೂಲಕ ಅಧಿಕೃತವಾಗಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ವಿಶ್ವವಿಖ್ಯಾತ ಬೇಲೂರು ಹಾಗೂ ಹಳೇಬೀಡು ಐತಿಹಾಸಿಕ ಹಿನ್ನೆಲೆಯ ನಡುವೆ 12ನೇ ವರ್ಷದ ಅಂತರಾಷ್ಟ್ರೀಯ ಯೋಗ ದಿನಾಚರಣೆಗೆ ಭರ್ಜರಿ ಸಿದ್ಧತೆಗಳು ನಡೆಯುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಜೂ.21ರಂದು ನಡೆಯಲಿರುವ ಯೋಗ ದಿನಾಚರಣೆಗಾಗಿ ಈಗಾಗಲೇ ಯೋಗ ಪಟುಗಳು, ವಿದ್ಯಾರ್ಥಿಗಳು ಹಾಗೂ ಅಧಿಕಾರಿಗಳ ಸಹಭಾಗಿತ್ವದಲ್ಲಿ ಯೋಗ ಮ್ಯಾರಥಾನ್ ಸೇರಿದಂತೆ ಹಲವು ಪೂರ್ವಸಿದ್ಧತಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ ಎಂದು ತಿಳಿಸಿದರು.

ಈಗಾಗಲೇ ಹಳೇಬೀಡಿನಲ್ಲಿ ಎರಡು ಬಾರಿ ಕೇಂದ್ರ ಸಚಿವರ ನೇತೃತ್ವದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ಯಶಸ್ವಿಯಾಗಿ ನಡೆದಿದೆ ಎಂದರು.

ತಹಸೀಲ್ದಾರ್ ಶ್ರೀಧರ್ ಕಂಕಣವಾಡಿ ಮಾತನಾಡಿ, ಚನ್ನಕೇಶವ ದೇವಾಲಯದಿಂದ ಕಾಲೇಜು ಮೈದಾನದವರೆಗೆ ನಡೆದ ಈ ಜಾಥಾವು ಸಾರ್ವಜನಿಕರಲ್ಲಿ ಯೋಗದ ಮಹತ್ವ, ಆರೋಗ್ಯಕರ ಜೀವನಶೈಲಿ ಹಾಗೂ ದೈಹಿಕ-ಮಾನಸಿಕ ಕ್ಷೇಮದ ಬಗ್ಗೆ ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದೆ. ಜೂ.21ರಂದು ಬೇಲೂರು ಹಾಗೂ ಹಳೇಬೀಡಿನಲ್ಲಿ ನಡೆಯಲಿರುವ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯೋಗದ ಸಂದೇಶವನ್ನು ಸಮಾಜದ ಎಲ್ಲ ವರ್ಗಗಳಿಗೆ ತಲುಪಿಸಬೇಕು ಎಂದರು.

ಜಾಥಾದಲ್ಲಿ ನೂರಾರು ಶಾಲಾ-ಕಾಲೇಜು ವಿದ್ಯಾರ್ಥಿಗಳು ಯೋಗದ ಮಹತ್ವ ಸಾರುವ ಬ್ಯಾನರ್‌ಗಳನ್ನು ಹಿಡಿದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಶಾಲಾ ಶಿಕ್ಷಕರು, ಯೋಗ ಸಂಘಟನೆಗಳ ಪ್ರತಿನಿಧಿಗಳು ಹಾಜರಿದ್ದರು.

# ಟಾಟಾ ಪವರ್ ಖಾಸಗೀಕರಣ ಪ್ರಸ್ತಾವನೆಗೆ ವಿರೋಧ

• ಪ್ರಜೋದಯ ವರದಿ



**ಬೇಲೂರು:** ರಾಜ್ಯದಲ್ಲಿ ವಿದ್ಯುತ್ ವಿತರಣೆ ಚಟುವಟಿಕೆ ಆರಂಭಿಸಲು ಟಾಟಾ ಪವರ್ ಕಂಪನಿ ಲಿಮಿಟೆಡ್ ಸಲ್ಲಿಸಿರುವ ಪರವಾನಗಿ ಅರ್ಜಿಗೆ ಕರ್ನಾಟಕ ವಿದ್ಯುತ್ ಮಂಡಳಿ ನೌಕರರ ಒಕ್ಕೂಟ ಹಾಗೂ ಸಂಘಗಳ ಒಕ್ಕೂಟ (ಹಾಸನ ವೃತ್ತ, ಸಕಲೇಶಪುರ ವಿಭಾಗ, ಬೇಲೂರು ಉಪವಿಭಾಗ) ತೀವ್ರ ವಿರೋಧ ವ್ಯಕ್ತಪಡಿಸಿದೆ.

ಈ ಸಂಬಂಧ ಒಕ್ಕೂಟದ ಪದಾಧಿಕಾರಿಗಳು ಬೇಲೂರು ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಕೆ. ಸುರೇಶ್ ಅವರನ್ನು ಭೇಟಿ ಮಾಡಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಆಕ್ಷೇಪಣೆ ಸಲ್ಲಿಸುವಂತೆ ಮನವಿ ಪತ್ರ ನೀಡಿದರು.

ವಿದ್ಯುತ್ ಕ್ಷೇತ್ರ ಖಾಸಗೀಕರಣದಿಂದ ಬಡವರು, ಮಧ್ಯಮ ವರ್ಗದ ಗ್ರಾಹಕರು ಹಾಗೂ ರೈತರ ಮೇಲೆ ಆರ್ಥಿಕ ಹೊರೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಒಕ್ಕೂಟದ ಪದಾಧಿಕಾರಿಗಳು ಆತಂಕ ವ್ಯಕ್ತಪಡಿಸಿದರಲ್ಲದೆ, ಖಾಸಗಿ ಕಂಪನಿಗಳು ಲಾಭದ ಉದ್ದೇಶದಿಂದ ಕಾರ್ಯ ನಿರ್ವಹಿಸುವುದರಿಂದ ವಿದ್ಯುತ್ ದರ ಹೆಚ್ಚಳ ಹಾಗೂ ಗ್ರಾಮೀಣ ಪ್ರದೇಶಗಳ ವಿದ್ಯುತ್ ಪೂರೈಕೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಸರ್ಕಾರಿ ಸ್ವಾಮ್ಯದ ವಿದ್ಯುತ್ ಸಂಸ್ಥೆಗಳಲ್ಲಿ ಇರುವ ಉದ್ಯೋಗ ಭದ್ರತೆ, ಮೀಸಲಾತಿ ವ್ಯವಸ್ಥೆ ಹಾಗೂ ಸಾರ್ವಜನಿಕ ಸೇವೆಯ ಜವಾಬ್ದಾರಿ ಖಾಸಗಿ ವಲಯದಲ್ಲಿ ದೊರೆಯುವುದಿಲ್ಲ, ಇದರಿಂದ ನೌಕರರ ಹಿತಾಸಕ್ತಿಗೆ ಹಾಗೂ ಯುವಕರ ಉದ್ಯೋಗಾವಕಾಶಗಳಿಗೆ ಧಕ್ಕೆಯಾಗಬಹುದು ಎಂದು ಅವರು ಹೇಳಿದರು.

ರೈತರಿಗೆ ನೀಡಲಾಗುತ್ತಿರುವ ಉಚಿತ ಹಾಗೂ ರಿಯಾಯಿತಿ ದರದ ವಿದ್ಯುತ್ ಯೋಜನೆಗಳನ್ನು ಮುಂದುವರಿಸುವುದು ಸೇರಿದಂತೆ ಸಾರ್ವಜನಿಕರ ಹಿತದೃಷ್ಟಿಯಿಂದ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡುವ ಪ್ರಸ್ತಾವನೆಯನ್ನು ಮರು ಪರಿಶೀಲಿಸಬೇಕು ಎಂದು ಒಕ್ಕೂಟ ಆಗ್ರಹಿಸಿತು.

ಈ ಸಂದರ್ಭದಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ನವಾಜ್ ಖಾನ್, ಜಗದೀಶ್, ರಾಘವೇಂದ್ರ, ಮಂಜುನಾಥ್, ಚಂದ್ರಶೇಖರ್, ಚಂದ್ರಕಲಾ, ಪಾಲಾಕ್ಷ, ದ್ವಾರಕನಾಥ ಸೇರಿದಂತೆ ವಿದ್ಯುತ್ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಪ್ರವೇಶಾತಿ ಆರಂಭ

• ಪ್ರಜೋದಯ ಏಂದ

**ಆಲೂರು:** ಪಟ್ಟಣದಲ್ಲಿರುವ ಸರ್ಕಾರಿ ಕಾಲೇಜಿನಲ್ಲಿ ಪ್ರವೇಶಾತಿ ಪ್ರಾರಂಭವಾಗಿದ್ದು, ತಾಲ್ಲೂಕಿನಲ್ಲಿ ಪಿಯುಸಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಬಹುದಾಗಿದೆ ಎಂದು ಪ್ರಾಂಶುಪಾಲ ಟಿ.ಪಿ. ಪುಟ್ಟರಾಜು ತಿಳಿಸಿದ್ದಾರೆ.

ಕಾಲೇಜಿನಲ್ಲಿ ಬಿ.ಎ. ಎಚ್‌ಇಪಿ/ಎಚ್‌ಕೆಎಸ್ ಮತ್ತು ಬಿ.ಕಾಂ., ಕೋರ್ಸ್‌ಗಳು ಲಭ್ಯವಿದೆ. ಕಾಲೇಜಿನಲ್ಲಿ ಉತ್ತಮ ಶೈಕ್ಷಣಿಕ ವಾತಾವರಣವಿದ್ದು, ಸುಸಜ್ಜಿತ ತರಗತಿ ಕೊಠಡಿಗಳು, ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್ ಸೌಲಭ್ಯವಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನುರಿತ ಪ್ರಾಧ್ಯಾಪಕರುಗಳಿಂದ ಉಚಿತ ತರಬೇತಿ ನೀಡಲಾಗುವುದು, ಪರಿಸರಸ್ನೇಹಿ ವಾತಾವರಣವಿದೆ ಎಂದು ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರತಿಯೊಂದು ಮಗುವೂ ಶಿಕ್ಷಣ ಪಡೆಯಬೇಕು

• ಪ್ರಜೋದಯ ವರದಿ




**ಹಾಸನ:** ಶಿಕ್ಷಣದಿಂದ ಒಂದು ಸಮಾಜದ ಬದಲಾವಣೆ ಸಾಧ್ಯ. ಹಾಗಾಗಿ ಪ್ರತಿಯೊಂದು ಮಗುವು ಶಿಕ್ಷಣ ಪಡೆಯುವಂತಾಗಬೇಕು. ಶಿಕ್ಷಣ ಸೇವಾ ಕಾರ್ಯದಲ್ಲಿ ಸರ್ಕಾರದ ಜೊತೆಗೆ ಸಂಘ ಸಂಸ್ಥೆಗಳು ಕೈಜೋಡಿಸಬೇಕು ಎಂದು ಸಮಾಜ ಸೇವಕ ಪ್ರವೀಣ್ ಗೌಡ ತಿಳಿಸಿದರು.

ತಾಲ್ಲೂಕಿನ ಹ್ಯಾರಾನೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್ ವಿತರಣೆ ಮಾಡಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ದೊರೆತರೆ ಬಡವರ ಅಭಿವೃದ್ಧಿಯಾಗುತ್ತದೆ. ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹವನ್ನು ನೀಡಬೇಕು. ಪರಿಸರ ಸಂರಕ್ಷಣೆ, ಮಳೆ ನೀರು ಕೊಯ್ಲು, ವೈಜ್ಞಾನಿಕ ಮನೋಭಾವದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕು ಎಂದರು.

ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಿಜಕ್ಕೂ ಪ್ರತಿಭಾವಂತರು, ಅವರಿಗೆ ಗುಣಮಟ್ಟ ಶಿಕ್ಷಣ ದೊರೆತರೆ ಉತ್ತಮ ಪ್ರಜೆಗಳಾಗಿ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು. ಶಾಲೆಯ ಅಭಿವೃದ್ಧಿಗೆ ನನ್ನ ಸಹಕಾರ ಸದಾ ಇದ್ದೇ ಇರುತ್ತದೆ ಎಂದು ತಿಳಿಸಿದರು

ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ವಿನೋದ, ಶಿಕ್ಷಕರಾದ ಎಂ.ಎಸ್. ಮಹೇಂದ್ರ, ವಿನುತ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಹೊಸದಾಗಿ ಕೋರ್ಸ್‌ಗಳ ಸೇರ್ಪಡೆ

**ಹಾಸನ:** ಮೊಸಳೆಹೊಸಹಳ್ಳಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸಂಸ್ಥೆಯಲ್ಲಿ ಈಗಾಗಲೇ ಲಭ್ಯವಿರುವ 5 UG Courseಗಳ ಜೊತೆಗೆ 2026-27 ಸಾಲಿನಿಂದ ಸಂಸ್ಥೆಯಲ್ಲಿ ಹೊಸದಾಗಿ U.G ಮತ್ತು PG/Mtech ಕೋರ್ಸ್‌ಗಳು ಸೇರ್ಪಡೆಯಾಗಿರುತ್ತವೆ ಎಂದು ಮೊಸಳೆ ಹೊಸಹಳ್ಳಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ.

**ಸಂಸ್ಥೆಯಲ್ಲಿನ ಕೋರ್ಸ್‌ಗಳ ವಿವರಗಳು:** ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ 90 ಸೀಟುಗಳು, ಸಿವಿಲ್ ಇಂಜಿನಿಯರಿಂಗ್ 60 ಸೀಟುಗಳು, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್ 90 ಸೀಟುಗಳು, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ 60 ಸೀಟುಗಳು, ಮೆಕ್ಯಾನಿಕಲ್ ಇಂಜಿನಿಯರಿಂಗ್ 60 ಸೀಟುಗಳು, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಂಡ್ ಡಾಟಾ ಸೈನ್ಸ್ 60 ಸೀಟುಗಳು.

2026-27 ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭಗೊಂಡಿರುವ ಯು,ಜಿ ಮತ್ತು ಪಿ. ಜಿ/ಎಮ್ ಟೆಕ್ ಕೋರ್ಸ್‌ಗಳು: ಕನ್‌ಸ್ಟ್ರಕ್ಷನ್ ಟೆಕ್ನಾಲಜಿ ಇನ್ ಸಿವಿಲ್ ಇಂಜಿನಿಯರಿಂಗ್ 18 ಸೀಟುಗಳು, ಮಶಿನ್ ಡಿಸೈನ್ ಇನ್ ಮೆಕ್ಯಾನಿಕಲ್ ಇಂಜಿನಿಯರಿಂಗ್ 18 ಸೀಟುಗಳನ್ನು ಹೊಂದಿದೆ.

2026-27 ನೇ ಸಾಲಿನಲ್ಲಿ C.E.T ಯಲ್ಲಿ Ranking ಪಡೆದು ಇಂಜಿನಿಯರಿಂಗ್ ಪ್ರವೇಶ ಬಯಸುತ್ತಿರುವ ಜಿಲ್ಲೆಯ ಮತ್ತು ರಾಜ್ಯದ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ಸಂಸ್ಥೆಯ ಪ್ರಾಂಶುಪಾಲರಾದ ಡಾ. ಟಿ. ರಂಗಸ್ವಾಮಿ ಅವರು ತಿಳಿಸಿದ್ದಾರೆ.

## ಜೂ.22 ರ ವರೆಗೆ ಟೆಲಿಗ್ರಾಂ ನಿಷೇಧ

• ಪ್ರಜೋದಯ ಏಂದ

**ನವದೆಹಲಿ:** ನೀಟ್ ಮರುಪರೀಕ್ಷೆಗೆ ಮುಂಚಿತವಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವ ಕೇಂದ್ರ ಸರ್ಕಾರ ಜೂ.22 ರ ವರೆಗೆ ದೇಶದಲ್ಲಿ ಟೆಲಿಗ್ರಾಂ ಅಪ್ಲಿಕೇಷನ್ ಅನ್ನು ನಿಷೇಧಿಸಿದೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಶಿಫಾರಸಿನ ಮೇರೆಗೆ ಮಾಹಿತಿ ತಂತ್ರಜ್ಞಾನ ಕಾಯ್ದೆ-2020 ರ ಸೆಕ್ಷನ್ 69 ಅಡಿಯಲ್ಲಿ ಟೆಲಿಗ್ರಾಂಗೆ ತಾತ್ಕಾಲಿಕ ನಿರ್ಬಂಧ ಹೇರಿದೆ.

ಇದರೊಂದಿಗೆ ಜೂ.30 ರ ವರೆಗೆ ಟೆಲಿಗ್ರಾಂನ ವೈಶಿಷ್ಟ್ಯವನ್ನ ಸ್ಥಗಿತಗೊಳಿಸಲು ಸೂಚನೆ ನೀಡಿದೆ. ಈಗಾಗಲೇ ಪೋಸ್ಟ್ ಮಾಡಿದ ಸಂದೇಶಗಳನ್ನ ನಂತರ ಎಡಿಟ್ ಮಾಡಿ ಪ್ರಶ್ನೆಪತ್ರಿಕೆ ಸೋರಿಕೆಯ ನಕಲಿ ಸಾಕ್ಷ್ಯ ಸೃಷ್ಟಿಸುವುದನ್ನ ತಡೆಯುವ ಕ್ರಮದ ಭಾಗ ಇದಾಗಿದೆ.

# ಆನ್‌ಲೈನ್ ಹಾಜರಾತಿ: ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕಳ್ಳಾಟಕ್ಕೆ ಕಡಿವಾಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಶಿಕ್ಷಕರ ಕಡ್ಡಾಯ ಹಾಜರಾತಿ ಕುರಿತಾಗಿ ಸಾಕಷ್ಟು ದೂರುಗಳಿದ್ದ ಹಿನ್ನಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಶಿಕ್ಷಕರಿಗೆ ಫೇಸ್-ಲೋಕೇಶನ್ ನಿಯಮವನ್ನು ಜಾರಿಗೆ ತಂದಿದೆ ಎಂದು ಕರ್ನಾಟಕ ರಾಜ್ಯ ಎಸ್‌ಡಿಎಂಸಿ ಸಮನ್ವಯ ಕೇಂದ್ರ, ವೇದಿಕೆ ಜಿಲ್ಲಾ ನಿರ್ದೇಶಕ ಪ್ರವೀಣ್ ಅವರು ತಿಳಿಸಿದರು.

ಹಲವು ವರ್ಷಗಳಿಂದ ಶಿಕ್ಷಣ ಇಲಾಖೆಗೆ ಕೆಲವು ಶಿಕ್ಷಕರು ಶಾಲೆಗೆ ನಿಯಮಿತವಾಗಿ ಹಾಜರಾಗದೆ ಇರುವುದು, ಪಾಠ ಬೋಧನೆಗೆ ಅಗತ್ಯವಾದ ಸಮಯವನ್ನು ನೀಡದೆ ಅಲೆದಾಡುವುದು, ಶಾಲಾ ಸಮಯದಲ್ಲಿ ವೈಯಕ್ತಿಕ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು, ಸುಳ್ಳು ಮಾಹಿತಿ ನೀಡಿ ಶಾಲೆಯಿಂದ ಹೊರಗಿರುವುದು ಹಾಗೂ ವಿದ್ಯಾರ್ಥಿಗಳ ಕಲಿಕೆಗೆ ಹಾನಿಯಾಗುವ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ ಅನೇಕ ದೂರುಗಳನ್ನು ಶಿಕ್ಷಣ ಇಲಾಖೆಗೆ ಕರ್ನಾಟಕ ರಾಜ್ಯ ಎಸ್‌ಡಿಎಂಸಿ ಸಮನ್ವಯ ಕೇಂದ್ರ, ವೇದಿಕೆ(ರಿ.) ಸಲ್ಲಿಸಿತ್ತು. ಇದೀಗ ಸಂಘದ ಮನವಿಗೆ ಸ್ಪಂದಿಸಿ ಫೇಸ್-ಲೋಕೇಶನ್ ನಿಯಮ ಜಾರಿಗೆ ತರಲಾಗಿದೆ ಎಂದರು.

ಶಾಲೆಗಳಲ್ಲಿ ಕರ್ತವ್ಯ ಲೋಪದ ಹಿನ್ನಲೆ ದೂರಿನ ಅನ್ವಯ ಶಿಕ್ಷಣ ಇಲಾಖೆ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಶಾಲೆಗಳಲ್ಲಿ ಶಿಕ್ಷಕರ ಹಾಜರಾತಿ ಮತ್ತು ಕರ್ತವ್ಯ ನಿರ್ವಹಣೆಯಲ್ಲಿ ಪಾರದರ್ಶಕತೆ ತರಲು ಈ ವ್ಯವಸ್ಥೆಯಡಿ ಶಿಕ್ಷಕರು ಶಾಲೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವುದನ್ನು ಖಚಿತಪಡಿಸುವುದರ ಜೊತೆಗೆ ಶಾಲಾ ಅವಧಿಯಲ್ಲಿ ಅವರು ಕರ್ತವ್ಯ ನಿರ್ವಹಿಸುತ್ತಿರುವುದನ್ನು ದಾಖಲಿಸುವ ಉದ್ದೇಶ ಹೊಂದಿದೆ.



ಈ ಕ್ರಮವನ್ನು ಬಹುಪಾಲು ಜವಾಬ್ದಾರಿಯುತ ಶಿಕ್ಷಕರು ಸ್ವಾಗತಿಸಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಶಿಸ್ತು ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವ ಮಹತ್ವದ ಹೆಜ್ಜೆಯೆಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆದರೆ ಶಾಲಾ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಇಚ್ಛಿಸದ ಕೆಲ ಅಲೆಮಾರಿ ಶಿಕ್ಷಕರಿಗೆ ಈ ವ್ಯವಸ್ಥೆಯ ನುಂಗಲಾಗದ ತುತ್ತಾಗಿ ಪರಿಣಮಿಸಿದೆ. ಇದೀಗ ಇಂತಹ ಕೆಲವು ಶಿಕ್ಷಕರು ಶಾಲೆಗಳಲ್ಲಿ ನೆಟ್‌ವರ್ಕ್ ಸಿಗುವುದಿಲ್ಲ ಶಿಕ್ಷಕರ ಬಳಿ ಆಂಡ್ರಾಯ್ಡ್ ಮೊಬೈಲ್ ಇಲ್ಲ ಮೊಬೈಲ್ ಬಳಕೆ ಮಾಡಲು ಬರುವುದಿಲ್ಲ ಎಂಬಂತಹ ಕುಂಟು ನೆಪಗಳನ್ನು ಮುಂದಿಡುತ್ತಿರುವುದು ಆಶ್ಚರ್ಯಕರವಾಗಿದೆ. ಏಕೆಂದರೆ ಕಳೆದ ಹಲವು ವರ್ಷಗಳಿಂದ ಶಿಕ್ಷಣ ಇಲಾಖೆಯ ಬಹುತೇಕ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಚಟುವಟಿಕೆಗಳು ಡಿಜಿಟಲ್ ವ್ಯವಸ್ಥೆಯ ಮೂಲಕವೇ ನಡೆಯುತ್ತಿವೆ.

ಫೇಸ್-ಲೋಕೇಶನ್ ಹಾಜರಾತಿ ವ್ಯವಸ್ಥೆಯು ಶಿಕ್ಷಕರ ಮೇಲೆ ಹೆಚ್ಚುವರಿ ಹೊರೆ ಹೇರುವ ಉದ್ದೇಶವನ್ನು ಹೊಂದಿಲ್ಲ. ಬದಲಾಗಿ ಸಾರ್ವಜನಿಕ ಹಣದಿಂದ ವೇತನ ಪಡೆಯುವ ಶಿಕ್ಷಕರು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿರುವುದನ್ನು ಖಚಿತಪಡಿಸುವ ವ್ಯವಸ್ಥೆಯಾಗಿದೆ. ಖಾಸಗಿ ಕ್ಷೇತ್ರದಲ್ಲಿ ಇಂತಹ ತಂತ್ರಜ್ಞಾನ ಆಧಾರಿತ ಹಾಜರಾತಿ ವ್ಯವಸ್ಥೆಗಳು ಸಾಮಾನ್ಯವಾಗಿರುವಾಗ, ಸರ್ಕಾರಿ ಶಾಲೆಗಳಲ್ಲಿ ಅದನ್ನು ಜಾರಿಗೆ ತರುವುದು ಸ್ವಾಗತಾರ್ಹ ಕ್ರಮವಾಗಿದೆ.

ಆದ್ದರಿಂದ ಫೇಸ್-ಲೋಕೇಶನ್ ಹಾಜರಾತಿ ವ್ಯವಸ್ಥೆಯನ್ನು ಉದ್ದೇಶಪೂರ್ವಕವಾಗಿ ವಿರೋಧಿಸುವುದು ಸುಳ್ಳು ನೆಪಗಳನ್ನು ಮುಂದಿಡುವುದು ಅಥವಾ ಇಲಾಖೆಯ ಆದೇಶಗಳನ್ನು ಪಾಲಿಸಲು ನಿರಾಕರಿಸುವ ಶಿಕ್ಷಕರ ವಿರುದ್ಧ ಶಿಕ್ಷಣ ಇಲಾಖೆಯು ಸಮಗ್ರ ತನಿಖೆ ನಡೆಸಬೇಕು. ಇಲಾಖೆಯ ಡಿಜಿಟಲ್ ಆದೇಶಗಳನ್ನು ಪಾಲಿಸದಿರುವುದು ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿರುವುದು ಅಥವಾ ತಪ್ಪು ಮಾಹಿತಿ ನೀಡಿರುವುದು ಸಾಬೀತಾದಲ್ಲಿ ನಿಯಮಾನುಸಾರ ಕಠಿಣ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

## ನಾಳೆ ವಿದ್ಯುತ್ ವ್ಯತ್ಯಯ

ಹಾಸನ: ಸಂತೆಪೇಟೆ 66/11ಕೆ.ವಿ ವಿ.ವಿ ಕೇಂದ್ರದಲ್ಲಿ ಜೂ.18 ರಂದು ತ್ರೈಮಾಸಿಕ ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಹಾಸನ ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಸಂತೆಪೇಟೆ ಸರ್ಕಲ್, ಸಿದ್ದಯ್ಯನಗರ, ಗಾಂಧಿಬಜಾರ್, ತಣ್ಣೀರುಹಳ್ಳ, ವಿಜಯನಗರ, ಕೆ.ಹೆಚ್.ಬಿ. ಶ್ರೀನಗರ, ಎನ್. ಆರ್ ವೃತ್ತ, ಹಾಸನಾಂಬ ದೇವಾಲಯ ಸುತ್ತಮುತ್ತ, ಹುಣಸಿನಕೆರೆ, ಮೈಕ್ರೊವೇವ್, ಬಿಟ್ಟಗೋಡನಹಳ್ಳಿ, ಮೆಡಿಕಲ್ ಕಾಲೇಜು, ಡಿ.ಸಿ ಕಚೇರಿ, ಎಸ್.ಪಿ ಕಚೇರಿ, ಆಜಾದ್ ರೋಡ್, ವಲ್ಲಭಾಯ್ ರೋಡ್, ನಗರಸಭೆ ಕಾರ್ಯಾಲಯ, ಕಟ್ಟಿನಕೆರೆ ಮಾರ್ಕೆಟ್, ದೇವೇಗೌಡನಗರ, ಹನುಮಂತಪುರ, ಅಗಿಲೆ, ಎರೆಬೋರೆ ಕಾವಲು, ತಟ್ಟೆಕೆರೆ, ಚನ್ನಪಟ್ಟಣ, ಹೊಸಕೊಪ್ಪಲು, ದೇವಮ್ಮ ಬಡಾವಣೆ, ಮಾರ್ಗನಹಳ್ಳಿ, ಬೈಲಹಳ್ಳಿ, ಬಸವೇಶ್ವರ ನಗರ, ಹೊಯ್ಸಳ ರೆಸಾರ್ಟ್, ಇತರೆ ಸರ್ಕಾರಿ ಕಚೇರಿಗಳು, ಶಾಲಾ ಕಾಲೇಜುಗಳ ಸ್ಥಾವರಗಳಲ್ಲಿ ಜೂ.18 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

## ಮೃತರ ಕುಟುಂಬಕ್ಕೆ ನ್ಯಾಯ ಸಿಗಬೇಕು | ಮೂರು ಜನರ ಜೀವ ಬಲಿ ಪಡೆದ ಕಟ್ಟಡ ಮತ್ತೆ ವಿವಾದದ ಸುಳಿಯಲ್ಲಿ

# ಪುರಸಭೆ ಬಾಕಿ ತೆರಿಗೆ ಪಾವತಿಗೆ ಆಗ್ರಹ: ಹಳೆಯ ಕಟ್ಟಡ ಧ್ವಂಸಕ್ಕೆ ತಡೆ

• ಪ್ರಜೋದಯ ವರದಿ



**ಬೇಲೂರು:** ಮೃತರ ಕುಟುಂಬಗಳಿಗೆ ಪರಿಹಾರ ನೀಡಬೇಕು ಹಾಗೂ ಪುರಸಭೆಗೆ ಬರಬೇಕಾದ ಬಾಕಿ ಹಣ ಪಾವತಿಸಬೇಕು. ಅಲ್ಲಿಯವರೆಗೆ ಹಳೆಯ ಕಟ್ಟಡದ ಧ್ವಂಸ ಕಾರ್ಯಕ್ಕೆ ಅವಕಾಶ ನೀಡುವುದಿಲ್ಲ ಎಂದು ಪುರಸಭೆ ಅಧ್ಯಕ್ಷ ಅಕ್ರಂ ಶರೀಫ್ ಅವರು ಸ್ಪಷ್ಟಪಡಿಸಿದ್ದಾರೆ.

ಪಟ್ಟಣದಲ್ಲಿ ಕಳೆದ 2025ರ ಮಾರ್ಚ್ ತಿಂಗಳಲ್ಲಿ ಹಳೆಯ ಕಟ್ಟಡ ಕುಸಿದು ಮೂವರು ಮೃತಪಟ್ಟ ಘಟನೆ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಮೃತರ ಕುಟುಂಬಗಳಿಗೆ ಪರಿಹಾರ ನೀಡುವುದು ಹಾಗೂ ಪುರಸಭೆಗೆ ಸಂಬಂಧಿಸಿದ ಬಾಡಿಗೆ ಮತ್ತು ಕಂದಾಯ ಬಾಕಿಯನ್ನು ಪಾವತಿಸುವಂತೆ ಈಗಾಗಲೇ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು ಎಂದು ಅಕ್ರಂ ಶರೀಫ್ ತಿಳಿಸಿದ್ದಾರೆ.

ಹಿಂದೆ ಇದೇ ಕಟ್ಟಡದಿಂದ ಮೂವರು ಮೃತಪಟ್ಟಿರುವುದರಿಂದ ಮೊದಲೇ ಸಭೆಯಲ್ಲಿ ಚರ್ಚಿಸಿ ನಿರ್ಣಯ ಮಾಡಿದ್ದೇವೆ. ಮೃತರ ಕುಟುಂಬಗಳಿಗೆ ಪರಿಹಾರ ನೀಡಬೇಕು. ಪುರಸಭೆಗೆ ಬರಬೇಕಾದ ಆದಾಯ ಮತ್ತು ಬಾಕಿ ಕಂದಾಯವನ್ನು ಕೂಡ ಪಾವತಿಸಬೇಕು. ನಂತರ ನಿಯಮಾನುಸಾರ ಅಗತ್ಯ ದಾಖಲೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ಯಾವುದೇ ಕ್ರಮಗಳನ್ನು ಕೈಗೊಳ್ಳದೆ ಏಕಾಏಕಿ ಧ್ವಂಸ ಕಾರ್ಯಕ್ಕೆ ಮುಂದಾಗಿದ್ದರಿಂದ ಅದನ್ನು ತಡೆದಿದ್ದೇವೆ. ಮೊದಲು ಸ್ಥಳವನ್ನು ಸುರಕ್ಷಿತಗೊಳಿಸಬೇಕು. ಅಗತ್ಯವಿದ್ದರೆ ತಗಡು ಶೀಟ್ ಅಳವಡಿಸಿ ಬಂದ್ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಪುರಸಭೆ ಮಾಜಿ ಅಧ್ಯಕ್ಷ ಮಾತನಾಡಿ, ಪುರಸಭೆಯ ನಿಯಮಗಳನ್ನು ಪಾಲಿಸದೆ ಕಟ್ಟಡ ಧ್ವಂಸ ಮಾಡಲು ಮುಂದಾಗಿರುವುದು ಸರಿಯಲ್ಲ. ಅಧಿಕಾರಿಗಳು ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಕಟ್ಟಡದ ಮುಂಭಾಗದ ಮಳಿಗೆಗಳಿಂದ ಪುರಸಭೆಗೆ ಸುಮಾರು ₹46 ಲಕ್ಷಕ್ಕೂ ಅಧಿಕ ಬಾಡಿಗೆ ಮತ್ತು ಕಂದಾಯ ಬಾಕಿ ಉಳಿದಿದೆ. ಈ ಹಣವನ್ನು ಪಾವತಿಸುವುದರ ಜೊತೆಗೆ ಕಟ್ಟಡ ಕುಸಿತದಲ್ಲಿ ಮೃತಪಟ್ಟ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಪುರಸಭೆ ಸದಸ್ಯರು ಒತ್ತಾಯಿಸಿದ್ದಾರೆ.

ಪುರಸಭೆ ಸದಸ್ಯ ಜಗದೀಶ್ ಮಾತನಾಡಿ, ಧ್ವಂಸ ಕಾರ್ಯವನ್ನು ತಡೆದು ಸುರಕ್ಷತಾ ಕ್ರಮವಾಗಿ ತಗಡು ಶೀಟ್‌ಗಳನ್ನು ಅಳವಡಿಸಿದ್ದಾರೆ. ಮೃತರ ಕುಟುಂಬಗಳಿಗೆ ನ್ಯಾಯ ದೊರೆಯುವವರೆಗೆ ಮತ್ತು ಪುರಸಭೆಯ ಬಾಕಿ ಹಣ ಪಾವತಿಯಾಗುವವರೆಗೆ ಮುಂದಿನ ಕ್ರಮಕ್ಕೆ ಅವಕಾಶ ನೀಡುವುದಿಲ್ಲ ಎಂದು ತಿಳಿಸಿದರು.

### ಸೂಕ್ತ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಿ

ಹಳೆಯ ಕಟ್ಟಡ ಕುಸಿದು ಮೃತಪಟ್ಟ ಮೂವರು ಬಡ ಬೀದಿಬದಿ ವ್ಯಾಪಾರಿಗಳ ಕುಟುಂಬಗಳ ಪರಿಸ್ಥಿತಿ ಅತ್ಯಂತ ಸಂಕಷ್ಟದಲ್ಲಿದ್ದು, ಅವರಿಗೆ ಮಾನವೀಯ ದೃಷ್ಟಿಯಿಂದ ಸೂಕ್ತ ಪರಿಹಾರ ನೀಡಬೇಕು. ಘಟನೆಯಲ್ಲಿ ತಮ್ಮ ಜೀವನೋಪಾಯಕ್ಕಾಗಿ ಬೀದಿಬದಿಯಲ್ಲಿ ವ್ಯಾಪಾರ ಮಾಡುತ್ತಿದ್ದ ಅಮಾಯಕರು ಪ್ರಾಣ ಕಳೆದುಕೊಂಡಿದ್ದಾರೆ. ಅವರ ಕುಟುಂಬಗಳ ಬದುಕು ಈಗ ದುಸ್ತರವಾಗಿದೆ. ಆದ್ದರಿಂದ ಕಟ್ಟಡ ಮಾಲೀಕರು ಮೃತರ ಕುಟುಂಬಗಳಿಗೆ ನ್ಯಾಯಯುತ ಪರಿಹಾರ ನೀಡುವ ಮೂಲಕ ಮಾನವೀಯತೆ ತೋರಬೇಕು. ಜೀವ ಕಳೆದುಕೊಂಡವರಲ್ಲಿ ಸಾಮಾನ್ಯ ಕುಟುಂಬದವರು ಇದ್ದರು. ಅವರ ಅಗಲಿಕೆಯಿಂದ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಪರಿಹಾರ ನೀಡುವುದು ಕೇವಲ ಕಾನೂನಿನ ವಿಚಾರವಲ್ಲ, ಅದು ಮಾನವೀಯ ಜವಾಬ್ದಾರಿಯೂ ಆಗಿದೆ. ಮೃತರ ಕುಟುಂಬಗಳಿಗೆ ಕನಿಷ್ಠ ಸೂಕ್ತ ಪರಿಹಾರ ದೊರೆಯುವಂತೆ ಕ್ರಮ ಕೈಗೊಳ್ಳಬೇಕು ಹಾಗೂ ಇಂತಹ ಘಟನೆಗಳು ಮರುಕಳಿಸದಂತೆ ಪಟ್ಟಣದಲ್ಲಿರುವ ಹಳೆಯ ಮತ್ತು ಅಪಾಯಕಾರಿ ಕಟ್ಟಡಗಳ ಬಗ್ಗೆ ಪುರಸಭೆ ಮುಂಜಾಗ್ರತಾ ಕ್ರಮ ಕೈಗೊಳ್ಳಿ.

-ಎ.ಆರ್. ಅಶೋಕ್, ಮಾಜಿ ಅಧ್ಯಕ್ಷ

## ಐಐಆರ್ ಎಫ್ ಶ್ರೇಯಾಂಕದಲ್ಲಿ ಎಂಸಿಇಗೆ 10ನೇ ಸ್ಥಾನ


• ಪ್ರಜೋದಯ ವರದಿ

**ಹಾಸನ:** ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ (ಎಂಸಿಇ) ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರ್‍ಯಾಂಕಿಂಗ್ ಫ್ರೇಮ್‌ವರ್ಕ್ ಪ್ರಕಟಿಸಿರುವ 2026ನೇ ಸಾಲಿನ ಅತ್ಯುತ್ತಮ ಖಾಸಗಿ ಸ್ವಾಯತ್ತ/ಸಂಯೋಜಿತ ಎಂಜಿನಿಯರಿಂಗ್ ಕಾಲೇಜುಗಳ ಪಟ್ಟಿಯಲ್ಲಿ ರಾಷ್ಟ್ರಮಟ್ಟದಲ್ಲಿ 10ನೇ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದೆ.

ಕಾಲೇಜು ದಕ್ಷಿಣ ವಲಯದ ಶ್ರೇಯಾಂಕದಲ್ಲಿ 8ನೇ ಸ್ಥಾನ ಹಾಗೂ ಕರ್ನಾಟಕ ರಾಜ್ಯ ಮಟ್ಟದಲ್ಲಿ 5ನೇ ಸ್ಥಾನ ಗಳಿಸಿದೆ.

ಶೈಕ್ಷಣಿಕ ಸಾಧನೆ, ಸಂಶೋಧನಾ ಚಟುವಟಿಕೆಗಳು, ವಿದ್ಯಾರ್ಥಿಗಳ ಉದ್ಯೋಗಾವಕಾಶಗಳು, ಕೈಗಾರಿಕಾ ಸಹಭಾಗಿತ್ವ, ಮೂಲಸೌಕರ್ಯ ಮತ್ತು ಸಾರ್ವಜನಿಕ ಅಭಿಪ್ರಾಯ ಸೇರಿದಂತೆ ವಿವಿಧ ಮಾನದಂಡಗಳ ಆಧಾರದ ಮೇಲೆ ಈ ಶ್ರೇಯಾಂಕವನ್ನು ಪ್ರಕಟಿಸಲಾಗಿದೆ.

## ಕಾಡಾನೆ ದಾಳಿಯಿಂದ ಪಾರಾದ ವ್ಯಕ್ತಿ



• ಪ್ರಜೋದಯ ವರದಿ

**ಬೇಲೂರು:** ಮನೆಯ ಹೊರಗೆ ಶಬ್ದ ಕೇಳಿ ಹೊರ ಬಂದ ವ್ಯಕ್ತಿಯನ್ನು ಕಾಡಾನೆಯೊಂದು ಅಟ್ಟಿಸಿಕೊಂಡು ಬಂದಿದ್ದು, ಕೂದಲೆಳೆ ಅಂತರದಲ್ಲಿ ದಾಳಿಯಿಂದ ಪಾರಾದ ಘಟನೆ ತಾಲ್ಲೂಕಿನ ಬಿಕ್ಕೋಡು ಗ್ರಾಮದ ಬಳಿ ನಡೆದಿದೆ.

ಜೋರು ಶಬ್ದಕ್ಕೆ ರಘುನಂದನ್ ಎಂಬುವವರು ಮನೆಯಿಂದ ಹೊರ ಬಂದು ನೋಡಿದ್ದಾರೆ. ಅವರ ಹಿಂದೆ ಸಾಕುನಾಯಿಯೂ ಹೋಗಿದ್ದು, ಕತ್ತಲಲ್ಲಿ ಕಾಡಾನೆ ಕಂಡಿದೆ. ತಕ್ಷಣ ರಘುನಂದನ್ ಮೇಲೆ ದಾಳಿಗೆ ಮುಂದಾದಾಗ ಮನೆಯೊಳಗೆ ಓಡಿ ಹೋಗಿ ಜೀವ ಉಳಿಸಿಕೊಂಡಿದ್ದಾರೆ. ಇತ್ತೀಚೆಗೆ ವಾಸದ ಮನೆಗಳ ಸಮೀಪವೇ ಕಾಡಾನೆಗಳು ಬರುತ್ತಿದ್ದು, ಸೂಕ್ತ ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆಯನ್ನು ಸ್ಥಳೀಯರು ಒತ್ತಾಯಿಸಿದ್ದಾರೆ. ಕಾಡಾನೆ ದಾಳಿ ಮಾಡುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

ಮತ್ತೊಂದೆಡೆ ಗೇಟ್ ತೆಗೆದು ಎಸ್ಟೇಟ್ ಒಳಗೆ ಕಾಡಾನೆಗಳು ನುಗ್ಗಿ ಹೋಗಿರುವ ಘಟನೆ ತಾಲ್ಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ನಡೆದಿದೆ. ಆಹಾರ ಅರಸಿ ಎಸ್ಟೇಟ್ ಒಳಗೆ ಹೋಗಲು ಮರಿ ಸೇರಿ ಐದು ಕಾಡಾನೆಗಳಿರುವ ಗುಂಪು ಬಂದಿದೆ. ಎಸ್ಟೇಟ್ ಸಿಬ್ಬಂದಿ ಗೇಟ್‌ಗೆ ಬೀಗ ಹಾಕಿದ್ದರಿಂದ ಸೊಂಡಿಲಿನಿಂದ ಗೇಟ್ ನೂಕುತ್ತಿದ್ದಂತೆ ಹಾಕಿದ್ದ ಬೀಗ ಕಿತ್ತು ಹೋಗಿದೆ. ನಂತರ ಎಲ್ಲಾ ಕಾಡಾನೆಗಳು ಎಸ್ಟೇಟ್‌ನೊಳಗೆ ಹೋಗಿವೆ. ಇದೇ ಗುಂಪಿನಲ್ಲಿ ರೇಡಿಯೋ ಕಾಲರ್ ಅಳವಡಿಸಿರುವ ಕಾಡಾನೆ ಇದ್ದು, ಕಾಡಾನೆಗಳು ಗೇಟ್ ತೆಗೆಯುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

# ಒಪ್ಪಂದ ಮುರಿದು ಬಿದ್ದ ಇತಿಹಾಸವಿದೆ: ಇರಾನ್

## ಅಮೇರಿಕಾ-ಇಸ್ರೇಲ್‌ಗೆ ಮುಖಭಂಗ | ಸೇನಾ ಮುಖ್ಯಸ್ಥರ ಹೇಳಿಕೆ



• ಪ್ರಜೋದಯ ವರದಿ

**ಟೆಹರಾನ್:** ಅಮೇರಿಕಾದೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಕುರಿತು ಎಚ್ಚರಿಕೆಯಿಂದ ಇರುವುದಾಗಿ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಮಂಗಳವಾರ ಅವರು ಹೇಳಿದ್ದಾರೆ.

ಒಪ್ಪಂದದ ಬದ್ಧತೆಗಳು ಮುರಿದುಬಿದ್ದ ಇತಿಹಾಸ ನಮ್ಮ ಮುಂದಿದೆ. ಕರಡುಗಳನ್ನು ಹರಿದು ಹಾಕಿದ ನಿದರ್ಶನಗಳೂ ಇವೆ. ಇವೆಲ್ಲವೂ ನಮ್ಮ ಮನಸ್ಸಿನಲ್ಲಿವೆ ಎನ್ನುವ ಮೂಲಕ ಎಚ್ಚರಿಕೆಯ ನಡೆ ಅನುಸರಿಸುವುದಾಗಿ ತಿಳಿಸಿದ್ದಾರೆ. ಅಮೇರಿಕಾದೊಂದಿಗೆ ಮಾಡಿಕೊಂಡಿರುವ ಒಪ್ಪಂದವು ಸದ್ಯಕ್ಕೆ ಯುದ್ಧವನ್ನು ಕೊನೆಗೊಳಿಸಿದೆ. ಎರಡು ತಿಂಗಳೊಳಗೆ ಅಂತಿಮ ಒಪ್ಪಂದ ಏರ್ಪಡಲಿದೆ ಎಂದು ವಿದೇಶಾಂಗ ಇಲಾಖೆಯ ಉಪ ಸಚಿವ ಕಝೆಮ್ ಘರಿಬಬಾದಿ ಹೇಳಿದ್ದಾರೆ.

ಒಪ್ಪಂದವನ್ನು ವಿಜಯವೆಂದೇ ಪರಿಗಣಿಸಿರುವ ಇರಾನ್ ಸೇನೆ, ಇದು ಅಮೇರಿಕಾ ಮತ್ತು ಇಸ್ರೇಲ್‌ಗೆ ಮುಖಭಂಗವನ್ನುಂಟು ಮಾಡಿದೆ ಎಂದು ಹೇಳಿದೆ. ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್, ಪಶ್ಚಿಮ ಏಷ್ಯಾ ಭಾಗದಲ್ಲಿ ಇದೊಂದು ದೊಡ್ಡ ಸಾಧನೆ ಎಂದು ಬಣ್ಣಿಸಿದ್ದಾರೆ.

**ನೆತನ್ಯಾಹು ಅಸಮಾಧಾನ:** ಅಮೇರಿಕಾ ಮತ್ತು ಇರಾನ್ ನಡುವೆ ಏರ್ಪಟ್ಟಿರುವ ಈ ಒಪ್ಪಂದದ ಬಗ್ಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅಸಮಾಧಾನ ಹೊರಹಾಕಿದ್ದಾರೆ. ಹೋರಾಟ ಇಲ್ಲಿಗೇ ನಿಂತಿಲ್ಲ ಎನ್ನುವ ಮೂಲಕ ಒಪ್ಪಂದದಂತೆ ನಡೆದುಕೊಳ್ಳುವ ಬಗ್ಗೆ ಅನುಮಾನ ಮೂಡಿಸಿದ್ದಾರೆ. ಫೆ.28ರಂದು ಇರಾನ್ ಮೇಲೆ ಜಂಟಿ ದಾಳಿ ನಡೆಸಿ, ಪರಮೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿಯನ್ನು ಹತ್ಯೆ ಮಾಡಿದಾಗ ಅಮೇರಿಕಾ ಮತ್ತು ಇಸ್ರೇಲ್ ಜೊತೆಯಾಗಿದ್ದವು.

**ಶುಲ್ಕ ವಿಧಿಸುವ ಸುಳಿವು**

ಜಾಗತಿಕ ತೈಲ ವ್ಯಾಪಾರದ ಪ್ರಮುಖ ಕೊಂಡಿಯಾಗಿರುವ ಹೊರ್ಮುಜ್ ಜಲಸಂಧಿ ಶಾಶ್ವತವಾಗಿ ಟೋಲ್ ಮುಕ್ತವಾಗಲಿದೆ ಎಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದರೂ ಕೆಲವೊಂದು ಸೇವೆಗಳಿಗೆ ಶುಲ್ಕ ವಿಧಿಸುವ ಸುಳಿವನ್ನು ಇರಾನ್ ನೀಡಿದೆ.

ಸಾರಿಗೆ ಸುಂಕಗಳನ್ನು ವಿಧಿಸಲು ಬಯಸುತ್ತಿಲ್ಲ. ಬದಲಾಗಿ ಒದಗಿಸಲಾಗುವ ಸೇವೆ ಗಳಿಗೆ ಪ್ರತಿಯಾಗಿ ಶುಲ್ಕ ವಸೂಲಿ ಮಾಡಲಾಗುವುದೆಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಕಾಯಿ ಅವರು ತಿಳಿಸಿದ್ದಾರೆ.

ಅಲ್ಲಿ ಯಾವ ರೀತಿಯ ಸೇವೆಗಳನ್ನು ಇರಾನ್ ಒದಗಿಸಲಿದೆ ಎನ್ನುವುದು ಗೊತ್ತಾ ಗಿಲ್ಲ. ಆದರೆ ಪರಿಸರ ಸಂಬಂಧಿತ ಶುಲ್ಕ ಗಳನ್ನು ವಿಧಿಸಬಹುದೆಂದು ಇರಾನ್ ಅಧಿಕಾರಿಗಳು ಹೇಳಿದ್ದಾರೆ. ಜಲಮಾರ್ಗದಲ್ಲಿ ಸಂಚರಿಸಲು ಪಾವತಿಸುವ ಸುಂಕ (ಟೋಲ್) ಮತ್ತು ಬಂದರಿನಲ್ಲಿ ತ್ಯಾಜ್ಯ ವಿಲೇವಾರಿ ಸೌಲಭ್ಯ ಒದಗಿಸುವಂತಹ ಸೇವೆಗಳಿಗಾಗಿ ವಿಧಿಸುವ ಶುಲ್ಕಕ್ಕೆ ವ್ಯತ್ಯಾಸವಿದೆ. ಕೆಲವು ಸಂದರ್ಭಗಳಲ್ಲಿ ಶುಲ್ಕಗಳು ಕಾನೂನುಬದ್ಧವಾಗಬಹುದು, ಆದರೆ ಹೊರ್ಮುಜ್ ಜಲಸಂಧಿಯಲ್ಲಿ ಸುಂಕ ವಿಧಿಸುವುದು ಕಾನೂನು ಎಂದು ಕಡಲ ಕಾನೂನುಬಾಹಿರ ತಜ್ಞರು ಹೇಳುತ್ತಾರೆ. ದೀರ್ಘಕಾಲದಿಂದ ಉಚಿತವಾಗಿದ್ದ ಜಲ ಮಾರ್ಗವನ್ನು ಬಳಸಲು ಹಣ ಪಾವತಿಸು ವುದನ್ನು ಕಡ್ಡಾಯಗೊಳಿಸುವ ಕ್ರಮವನ್ನು ಕೇವಲ ಶುಲ್ಕ ಎಂದು ಕರೆಯುವುದರಿಂದಲೇ ಅದು ಕಾನೂನುಬದ್ಧ ಎನಿಸಿಕೊಳ್ಳುವುದಿಲ್ಲವೆಂದು ಅಭಿಪ್ರಾಯಪಡುತ್ತಾರೆ.

ಕರಾವಳಿ ದೇಶವೊಂದು ನೈಸರ್ಗಿಕ ಜಲಮಾರ್ಗದ ಮೂಲಕ ಹಾದುಹೋಗಲು ಹಣ ವಸೂಲಿ ಮಾಡಲು ಅಂತರರಾಷ್ಟ್ರೀಯ ಕಾನೂನಿನಲ್ಲಿ ಯಾವುದೇ ಅವಕಾಶವಿಲ್ಲ, ನೀವು ಅದನ್ನು ಸುಂಕ ಎಂದು ಕರೆದರೂ, ಶುಲ್ಕ ಎಂದು ಕರೆದರೂ ಅಥವಾ ಬೇರೇನೇ ಕರೆದರೂ ಸರಿಯೇ ಅದು ಕಾನೂನುಬಾಹಿರ ಎಂದು ನೇವಲ್ ವಾರ್ ಕಾಲೇಜಿನ ಕಡಲ ಕಾರ್ಯತಂತ್ರದ ವಿಭಾಗದ ಮುಖ್ಯಸ್ಥ ಜೇಮ್ಸ್ ಆರ್.ಹೋಮ್ಸ್ ಹೇಳಿದ್ದಾರೆ.

ಉದಾಹರಣೆಗೆ ಮಲಕ್ಕಾ, ತೈವಾನ್ ಜಲಸಂಧಿಯ ಮೂಲಕ ಹಾದುಹೋಗಲು ಯಾವುದೇ ಶುಲ್ಕ ಪಾವತಿ ಮಡಬೇಕಿಲ್ಲ. ಆದರೆ ಪನಾಮ ಅಥವಾ ಸೂಯೆಜ್ ಕಾಲುವೆಯಂತಹ ಕೃತಕ ಜಲಮಾರ್ಗಗಳಲ್ಲಿ, ಆ ಕಾಲುವೆಗಳನ್ನು ನಿರ್ವಹಿಸುವ ಕರಾವಳಿ ದೇಶಗಳು ಸೇವೆಗಳನ್ನು ಒದಗಿಸು ತ್ತವೆ ಮತ್ತು ಆಸೇವೆಗಳಿಗೆ ಹಾಗೂ ಅಲ್ಲಿನ ಮೂಲ ಸೌಕರ್ಯಗಳಿಗಾಗಿ ಹಣದ ವಹಿವಾಟು ನಡೆಯುತ್ತದೆಂದು ಹೋಮ್ಸ್ ಹೇಳಿದ್ದಾರೆ.

ಹೊರ್ಮುಜ್ ಒಂದು ನೈಸರ್ಗಿಕ ಜಲ ಮಾರ್ಗವಾಗಿದೆ. ನನಗೆ ತಿಳಿದ ಮಟ್ಟಿಗೆ ಇರಾನ್ ಶುಲ್ಕ ವಿಧಿಸಲು ಮುಂದಾಗುತ್ತಿರುವ ಏಕೈಕ ಸೇವೆ ಎಂದರೆ ಹಡಗುಗಳ ಮೇಲೆ ದಾಳಿ ಮಾಡದಿರುವುದು ಮಾತ್ರ ಎಂದು ಹೇಳಿದ್ದಾರೆ.

## ವಸತಿ ನಿಲಯ ಪರಿಶೀಲಿಸಿದ ಸಂಸದ ಶ್ರೇಯಸ್



• ಪ್ರಜೋದಯ ವರದಿ

**ಹಾಸನ:** ಹಲ್ಲಿ ಬಿದ್ದ ಊಟ ಸೇವಿಸಿ 30 ವಿದ್ಯಾರ್ಥಿಗಳು ಅಸ್ವಸ್ಥರಾಗಿದ್ದ ಹಿನ್ನಲೆ ಕಾರೆಕೆರೆ ಕೃಷಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಸಂಸದ ಶ್ರೇಯಸ್ ಪಟೇಲ್ ಅವರು ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.


ಈ ಸಂದರ್ಭದಲ್ಲಿ ವಸತಿ ನಿಲಯದ ಆವರಣ, ಕೊಠಡಿಗಳು, ಶೌಚಾಲಯಗಳು, ಕುಡಿಯುವ ನೀರಿನ ವ್ಯವಸ್ಥೆ ಹಾಗು ವಿದ್ಯಾರ್ಥಿನಿಯರಿಗೆ ಒದಗಿಸಲಾಗುತ್ತಿರುವ ಮೂಲಭೂತ ಸೌಲಭ್ಯಗಳನ್ನು ಪರಿಶೀ ಲಿಸಿ, ಸ್ವಚ್ಛತೆ ಮತ್ತು ಆರೋಗ್ಯಕರ ವಾತಾವರಣ ಕಾಪಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ವೇಳೆ ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿ ಅವರ ಸಮಸ್ಯೆಗಳು ಹಾಗು ಬೇಡಿಕೆಗಳನ್ನು ಆಲಿಸಿ, ಅವುಗಳ ಪರಿಹಾರಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

400 ವಿದ್ಯಾರ್ಥಿನಿಯರಿರುವ ಹಾಸ್ಟೆಲ್‌ಗೆ ಅಗತ್ಯಕ್ಕೆ ತಕ್ಕಷ್ಟು ಸಿಲಿಂಡರ್‌ಗಳು ಪೂರೈಕೆಯಾಗದೆ ಆಹಾರ ತಯಾರಿಸಲು ಕೊರತೆ ಎದುರಾಗಿತ್ತು. ಆದ್ದರಿಂದ ಹಾಸ್ಟೆಲ್‌ನ ಅಡುಗೆ ಕೋಣೆಯಿಂದ ಹೊರಗೆ ಸೌದೆ ಒಲೆಯಲ್ಲಿ ಅಡುಗೆ ತಯಾರಿಸುವ ವೇಳೆ ಹಲ್ಲಿ ಬಿದ್ದು ವಿದ್ಯಾರ್ಥಿನಿಯರು ಅಸ್ವಸ್ಥಗೊಂಡು ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಆರೋಗ್ಯವಾಗಿ ಹಾಸ್ಟೆಲ್‌ಗೆ ಮರಳಿದ್ದಾರೆ.

ಈ ಹಿನ್ನಲೆ ವಸತಿ ನಿಲಯಕ್ಕೆ ಭೇಟಿ ನೀಡಿ, ಅಡುಗೆ ಮನೆ, ಊಟ ಕೊಠಡಿ, ಕಟ್ಟಡದ ಸ್ಥಿತಿಗತಿಯನ್ನು ಖುದ್ದು ಪರಿಶೀಲನೆ ನಡೆಸಿದ ಸಂಸದರು, ಅಗತ್ಯ ಮೂಲಸೌಲಭ್ಯ ಕಲ್ಪಿಸುವ ಬಗ್ಗೆ ಭರವಸೆ ನೀಡಿ, ಸ್ವಚ್ಛತೆಗೆ ಒತ್ತು ನೀಡುವಂತೆ ತಿಳಿಸಿದರು.

## ನಿಯಮ ಉಲ್ಲಂಘನೆ: ಕಚೇರಿ ಬಾಗಿಲಿಗೆ ಕಸ ಸುರಿದು ಎಚ್ಚರಿಕೆ



• ಪ್ರಜೋದಯ ವರದಿ

**ಬೇಲೂರು:** ಸ್ವಚ್ಛತಾ ನಿಯಮ ಉಲ್ಲಂಘಿಸಿ ಸಾರ್ವಜನಿಕ ಸ್ಥಳದಲ್ಲಿ ಕಸ ಹಾಕುತ್ತಿದ್ದ ಮೈಕ್ರೋ ಫೈನಾನ್ಸ್ ಸಂಸ್ಥೆಯ ಕಚೇರಿ ಬಾಗಿಲಿಗೆ ಕಸ ಸುರಿದು ಪುರಸಭೆ ಅಧಿಕಾರಿಗಳು ಹಾಗು ಪೌರಕಾರ್ಮಿಕರು ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ಪಂಪ್‌ಹೌಸ್ ರಸ್ತೆಯಲ್ಲಿರುವ ಕ್ರೆಡಿಟ್‌ಆಕ್ಸೆಸ್ ಗ್ರಾಮೀಣ ಲಿಮಿಟೆಡ್ ಕಚೇರಿಯಿಂದ ಕಸವನ್ನು ರಸ್ತೆ ಬದಿ ಹಾಗು ಸಾರ್ವಜನಿಕ ಸ್ಥಳಗಳಲ್ಲಿ ಎಸೆಯಲಾಗುತ್ತಿದೆಂಬ ದೂರು ಪುರಸಭೆಗೆ ಬಂದಿತ್ತು. ಈ ಕುರಿತು ಅಧಿಕಾರಿಗಳು ಹಲವು ಬಾರಿ ಸೂಚನೆ ನೀಡಿದ್ದರೂ ಸಂಸ್ಥೆ ನಿಯಮಗಳನ್ನು ಪಾಲಿಸದೆ ಉಡಾಫೆಯಿಂದ ವರ್ತಿಸಿದ್ದಾರೆ. ಈ ಹಿನ್ನಲೆ ಸ್ಥಳಕ್ಕೆ ಭೇಟಿ ನೀಡಿದ ಪೌರಕಾರ್ಮಿಕರು ರಸ್ತೆಯಲ್ಲಿದ್ದ ಕಸವನ್ನು ತೆರವುಗೊಳಿಸಿ, ಅದೇ ಕಸವನ್ನು ಸಂಸ್ಥೆಯ ಕಚೇರಿ ಆವರಣದಲ್ಲೇ ಸುರಿದು ಸ್ವಚ್ಛತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಚ್ಚರಿಕೆ ನೀಡಿದರು.

ಈ ಕುರಿತು ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ ಬಸವರಾಜ ಟಾಕಪ್ಪ ಶಿಗ್ಗಾವಿ ಅವರು, ಪಟ್ಟಣದ ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬ ನಾಗರಿಕ ಹಾಗು ಸಂಸ್ಥೆಯ ಜವಾಬ್ದಾರಿಯಾಗಿದೆ. ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ಮುಂದೆಯೂ ಇದೇ ರೀತಿಯ ನಿರ್ಲಕ್ಷ್ಯ ಕಂಡು ಬಂದರೆ ಪೊಲೀಸ್ ದೂರು ದಾಖಲಿಸುವುದು ಸೇರಿ ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದ ಅವರು, ಸ್ವಚ್ಛ ಬೇಲೂರು ನಿರ್ಮಾಣಕ್ಕೆ ಸಾರ್ವಜನಿಕರು, ವ್ಯಾಪಾರಸ್ಥರು ಹಾಗು ಖಾಸಗಿ ಸಂಸ್ಥೆಗಳು ಸಹಕರಿಸಬೇಕೆಂದು ಮನವಿ ಮಾಡಿದರು.

ಪುರಸಭೆ ಆರೋಗ್ಯಾಧಿಕಾರಿ ಲೋಹಿತ್, ಸಿಬ್ಬಂದಿ ಹರೀಶ್ ಇತರರು ಉಪಸ್ಥಿತರಿದ್ದರು.

### ಪರವಾನಗಿ ನೀಡದಂತೆ ಆಕ್ಷೇಪಣೆ ಸಲ್ಲಿಸಲು ನೌಕರರ ಒಕ್ಕೂಟ ಮನವಿ

# ಖಾಸಗಿ ಕಂಪನಿಯಿಂದ ವಿದ್ಯುತ್ ವಿತರಣೆಗೆ ವಿರೋಧ

• ಪ್ರಜೋದಯ ವರದಿ

**ಹಾಸನ:** ಟಾಟಾ ಪವರ್ ಕಂಪನಿ ಲಿಮಿಟೆಡ್ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣೆ ಚಟುವಟಿಕೆ ಪ್ರಾರಂಭಿಸಲು ಪರವಾನಗಿ ನೀಡುವುದನ್ನು ವಿರೋಧಿಸಿ ಆಕ್ಷೇಪಣೆ ಸಲ್ಲಿಸುವಂತೆ ಕರ್ನಾಟಕ ವಿದ್ಯುತ್ ಮಂಡಳಿ ನೌಕರರ ಒಕ್ಕೂಟದ ಕಾರ್ಯದರ್ಶಿ ಸತ್ಯನಾರಾಯಣ ಅವರು ತಿಳಿಸಿದರು.




ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟಾಟಾ ಪವರ್ ಕಂಪನಿ ವಿದ್ಯುತ್ ವಿತರಣೆ ಚಟುವಟಿಕೆ ಪ್ರಾರಂಭಿಸಲು ಪರವಾನಗಿ ಪಡೆಯಲು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿರುವುದು ನಿಗಮ ಮತ್ತು ಗ್ರಾಹಕರಿಗೆ ಆತಂಕಕಾರಿ ವಿಷಯವಾಗಿದೆ ಎಂದು ಹೇಳಿದರು.

ಪ್ರಸ್ತುತ ಸರ್ಕಾರಿ ಸ್ವಾಮ್ಯದ ಕಂಪನಿಗಳು ಉತ್ಪಾದನೆ ಹೆಚ್ಚಾಗಿದ್ದರೂ, ಸಾರ್ವಜನಿಕ ಹಿತದೃಷ್ಟಿಯಿಂದ ಕಡಿಮೆ ದರದಲ್ಲಿ ವಿದ್ಯುತ್ ನೀಡುತ್ತಿವೆ. ಆದರೆ, ಖಾಸಗೀಕರಣಗೊಂಡರೆ ಮೀಟರ್ ನೆಪದಲ್ಲಿ ಮನಬಂದಂತೆ ದರ ಹೆಚ್ಚಳ ಮಾಡಿ ಬಡ ಮತ್ತು ಮಧ್ಯಮ ವರ್ಗದ ಗ್ರಾಹಕರ ರಕ್ತ ಹೀರುವುದು ಗ್ಯಾರಂಟಿ. ಸಾವಿರಾರು ನಿರುದ್ಯೋಗಿ ಯುವಕರಿಗೆ ಸರ್ಕಾರಿ ಉದ್ಯೋಗವೇ ಸಿಗುವುದಿಲ್ಲ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ವಿದ್ಯುತ್ ದರ ಹೆಚ್ಚಳವಾದರೆ ಕೈಗಾರಿಕೆ ಬೆಳವಣಿಗೆ ಕುಂಠಿತವಾಗುತ್ತದೆ. ನಗರ ಮತ್ತು ಲಾಭದಾಯಕ ಪ್ರದೇಶಗಳಿಗೆ ಮಾತ್ರ ಸೇವೆ ನೀಡುವ ಸಾಧ್ಯತೆ ಇದ್ದು, ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶ ನಿರ್ಲಕ್ಷ್ಯಕ್ಕೊಳಗಾಗುವ ಸಾಧ್ಯತೆ ಇದೆ ಎಂದರು.

ರಾಜ್ಯದ ಎಲ್ಲಾ ವಿದ್ಯುತ್ ಕಂಪನಿಗಳು ಈಗಾಗಲೇ ನುರಿತ ಸಿಬ್ಬಂದಿ, ಸಾವಿರಾರು ಕೋಟಿ ರೂ. ಮೌಲ್ಯದ ವಿತರಣಾ ಜಾಲ, ಉಪಕೇಂದ್ರಗಳು ಹಾಗು ಯಂತ್ರೋಪಕರಣಗಳ ಬೃಹತ್ ಮೂಲಸೌಕರ್ಯವನ್ನು ಹೊಂದಿವೆ. ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಾಣವಾದ ಈ ಬೃಹತ್ ಸಾಮ್ರಾಜ್ಯವನ್ನು ಸಿದ್ಧವಾಗಿಟ್ಟುಕೊಂಡು, ಲಾಭದ ಆಸೆಗೆ ಪರ ರಾಜ್ಯದ ಖಾಸಗಿ ಸಂಸ್ಥೆಯೊಂದಕ್ಕೆ ವಹಿಸಿಕೊಡುವುದು ಅಕ್ಷಮ್ಯ ಅಪರಾಧವೆಂದು ದೂರಿದರು.

ಮಲೆನಾಡು, ಕರಾವಳಿ ಮತ್ತು ಹಿಂದುಳಿದ ಗ್ರಾಮೀಣ ಭಾಗಗಳಲ್ಲಿ ಖಾಸಗಿ ಸಂಸ್ಥೆಗಳು ವಿದ್ಯುತ್ ಸೇವೆಗಳನ್ನು ನೀಡುವುದಿಲ್ಲ. ಸಾರ್ವಜನಿಕ ಹಣದಿಂದ ನಿರ್ಮಿಸಿರುವ ವಿದ್ಯುತ್ ಗ್ರಿಡ್, ಕಂಬಗಳು ಮತ್ತು ಮೂಲ ಸೌಕರ್ಯಗಳನ್ನು ಖಾಸಗಿ ಸಂಸ್ಥೆಗೆ ನೀಡುವುದರಿಂದ ಜನರ ಹಣದ ದುರುಪಯೋಗವಾಗುತ್ತದೆ. ಗ್ರಾಹಕರಿಗೆ, ರೈತರ ನೀರಾವರಿ ಯೋಜನೆಗಳಿಗೆ ಉಚಿತ ವಿದ್ಯುತ್ ಮತ್ತು ರಿಯಾಯಿತಿ ದರದಲ್ಲಿ ಖಾಸಗಿ ಕಂಪನಿಗಳು ವಿದ್ಯುತ್ ಪೂರೈಸುವುದಿಲ್ಲ. ಇದರಿಂದ ರೈತರು ಸಂಕಷ್ಟಕ್ಕೆ ಒಳಗಾಗುತ್ತಾರೆಂದು ತಿಳಿಸಿದರು.

ವಿದ್ಯುತ್ ದೇಶದ ಭದ್ರತೆ ಮತ್ತು ಜನರ ಬದುಕಿಗೆ ಅತ್ಯಗತ್ಯವಾಗಿದೆ. ಅದನ್ನು ಖಾಸಗಿ ಲಾಭದ ಉದ್ದೇಶದ ಅಧೀನಕ್ಕೆ ನೀಡುವುದು ರಾಜ್ಯದ ಮತ್ತು ಒಕ್ಕೂಟ ವ್ಯವಸ್ಥೆಯ ಮೂಲಭೂತ ಸೌಕರ್ಯಕ್ಕೆ ಮಾರಕವಾಗುತ್ತದೆ. ನಾವು ಲಾಭದ ಲೆಕ್ಕಚಾರವಿಲ್ಲದೆ ಗ್ರಾಹಕರು ಕೈಗಾರಿಕೆ, ಕೃಷಿ ಅಭಿವೃದ್ಧಿಗೆ ಒದಗಿಸುತ್ತಿದ್ದೇವೆ. ಆದರೆ, ಖಾಸಗಿಯವರು ಬರೀ ಲಾಭ ಮಾಡುವ ಉದ್ದೇಶ ಹೊಂದಿರುತ್ತಾರೆ. ಹೀಗಾಗಿ ಜಿಲ್ಲಾ ವ್ಯಾಪ್ತಿಯ ಎಲ್ಲಾ ಗ್ರಾಹಕರು ಮತ್ತು ರೈತರು ಆ.23ರ ಒಳಗಾಗಿ ಆಕ್ಷೇಪಣೆ ಸಲ್ಲಿಸುವುದರ ಜೊತೆಗೆ ಮುಖ್ಯಮಂತ್ರಿಗೂ ಹಕ್ಕೊತ್ತಾಯ ಸಲ್ಲಿಸಬೇಕೆಂದು ಮನವಿ ಮಾಡಿದರು.

ಸಂಘಟನಾ ಕಾರ್ಯದರ್ಶಿ ವಿವೇಕಾನಂದ ಪೊನ್ನಪ್ಪ, ಮಂಜುನಾಥ್, ಚಂದ್ರಶೇಖರ ಶಾಸ್ತ್ರಿ, ಪ್ರವೀಣ್, ಹರೀಶ್ ಹಾಜರಿದ್ದರು.

## ಪೌರಕಾರ್ಮಿಕರ ಯೋಗಕ್ಷೇಮಕ್ಕೆ ವಿಶೇಷ ಆದ್ಯತೆ

» ಮೊದಲನೇ ಪುಟದಿಂದ

ಸಾಲಪ್ಪ ವರದಿಯ ಕುರಿತು ಮಾಹಿತಿ ಪಡೆದು ಅದರ ಸೌಲಭ್ಯಗಳ ಪ್ರಯೋಜನವನ್ನು ಪಡೆದು ಕೊಳ್ಳಬೇಕೆಂದು ಕರೆ ನೀಡಿದರು.

ರಾಜ್ಯದಲ್ಲಿ ಸುಮಾರು 7,500 ಮ್ಯಾನುಯಲ್ ಸ್ಕ್ಯಾವೆಂಜರ್‌ಗಳಿಗೆ ಆರೋಗ್ಯ ವಿಮೆ ಸೌಲಭ್ಯ ಕಲ್ಪಿಸುವ ಗುರಿ ಹೊಂದಲಾಗಿದೆ. ಜೊತೆಗೆ ಪೌರಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ವಿಶೇಷ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಶಾಲಾ ಶಿಕ್ಷಣದಿಂದ ವಂಚಿತರಾದ ಮಕ್ಕಳಿಗೆ ಉಚಿತ ತರಬೇತಿ ಹಾಗು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ವಿಶೇಷ ಶೈಕ್ಷಣಿಕ ನೆರವು ನೀಡುವ ಕಾರ್ಯಕ್ರಮಗಳನ್ನು ಜಾರಿ ಗೊಳಿಸುವ ಉದ್ದೇಶವಿದೆ ಎಂದು ಹೇಳಿದರು.

ಮಹಾನಗರ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ ಮಾತನಾಡಿ, ಪೌರಕಾರ್ಮಿಕರನ್ನು ಗೌರವದಿಂದ ಕಾಣುವುದು ಸಮಾಜದ ಮೊದಲ ಕರ್ತವ್ಯವಾಗಿದೆ. ನಗರದ ಸ್ವಚ್ಛತೆ ಕಾಪಾಡುವಲ್ಲಿ ಅವರು ಸಲ್ಲಿಸುತ್ತಿರುವ ಸೇವೆ ಅಮೂಲ್ಯವಾದದ್ದು. ಹಾಸನ ನಗರ ವೇಗವಾಗಿ ವಿಸ್ತಾರವಾಗುತ್ತಿರುವ ಸಂದರ್ಭದಲ್ಲಿ ಕೇವಲ 110 ಪೌರಕಾರ್ಮಿಕರು ಸುಮಾರು 3.18 ಲಕ್ಷ ಜನಸಂಖ್ಯೆಗೆ ಸೇವೆ ಸಲ್ಲಿಸುತ್ತಿದ್ದಾರೆ. ಈಗಾಗಲೇ 41 ಪೌರಕಾರ್ಮಿಕರಿಗೆ ಮನೆ ನಿರ್ಮಿಸಿ ನೀಡಲಾಗಿದ್ದು, ಉಳಿದವರಿಗೆ ವಸತಿ ಸೌಲಭ್ಯ ಕಲ್ಪಿಸಲು 1 ಎಕರೆ 28 ಗುಂಟೆ ಜಮೀನು ಗುರುತಿಸಲಾಗಿದೆ ಎಂದು ತಿಳಿಸಿದರು.

ನಿಗಮದ ಸಲಹೆಗಾರ ಕುಮಾರ್, ದಲಿತ ಹಿರಿಯ ಮುಖಂಡ ಹೆಚ್.ಪಿ.ಶಂಕರರಾಜು, ಮನುಕುಮಾರ್, ಎಇಇ ಸತ್ಯನಾರಾಯಣ್ ಮತ್ತಿತರರು ಉಪಸ್ಥಿತರಿದ್ದರು.

### ರಾಜ್ಯದಲ್ಲಿ ಅವಕಾಶ ಸಿಗದಿದ್ದರೆ ಬೇರೆ ರಾಜ್ಯಗಳಲ್ಲಿ ಹೂಡಿಕೆ ಅನಿವಾರ್ಯ

**ಬಾಗಲಕೋಟೆ:** ರಾಜ್ಯದಲ್ಲಿ 5,700 ಕೋಟಿ ರೂ. ವೆಚ್ಚದಲ್ಲಿ ವಿಮಾನ ಇಂಧನ ಉತ್ಪಾದನಾ ಘಟಕ ಮತ್ತು ಬಯೊ ಪ್ಲಾಸ್ಟಿಕ್ ಘಟಕಗಳ ಸ್ಥಾಪನೆಗೆ ಅನುಮತಿ ಕೋರಿ ನಿರಾಣಿ ಗ್ರೂಪ್ ಸಲ್ಲಿಸಿದ್ದ ಅರ್ಜಿ ತಿರಸ್ಕರಿಸಲಾಗಿದೆ. ಇಲ್ಲಿ ಅವಕಾಶ ನೀಡದಿದ್ದರೆ, ಬೇರೆ ರಾಜ್ಯಗಳಲ್ಲಿ ಹೂಡಿಕೆ ಅನಿವಾರ್ಯ ಆಗುತ್ತದೆ ಎಂದು ಮಾಜಿ ಸಚಿವ ಮುರುಗೇಶ ನಿರಾಣಿ ಅವರು ಹೇಳಿದರು.

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಬೇರೆ ದೇಶ, ಬೇರೆ ರಾಜ್ಯದ ಹೂಡಿಕೆ ದಾರರನ್ನು ಆಹ್ವಾನಿಸಲಾಗುತ್ತದೆ. ರಾಜ್ಯದವರೇ ಆಸಕ್ತಿ ತೋರಿದರೆ, ತಿರಸ್ಕರಿಸಲಾಗುತ್ತದೆಂದು ಮಂಗಳವಾರ ತಿಳಿಸಿದರು.

## ಪರಿಷತ್ ಚುನಾವಣೆಗೆ ರೆಸಾರ್ಟ್ ತಂತ್ರಗಾರಿಕೆ

» ಮೊದಲನೇ ಪುಟದಿಂದ

**2 ದಿನಗಳ ಕಾಲ ತರಬೇತಿ:** ಜೆಡಿಎಸ್-ಬಿಜೆಪಿಯ ಭಿನ್ನಮತಿಯರು ಕೈ ಕೊಟ್ಟರೂ ತನ ಪಕ್ಷದ ಶಾಸಕರ 2ನೇ ಪ್ರಾಶಸ್ತ್ಯ ಮತಗಳಲ್ಲಿ 5ನೇ ಅಭ್ಯರ್ಥಿಯನ್ನು ಗೆಲ್ಲಿಸು ವುದು ಡಿ.ಕೆ. ಶಿವಕುಮಾರ್ ಅವರ ತಂತ್ರಗಾರಿಕೆಯಾಗಿದೆ. ಹೀಗಾಗಿ ಯಾವ ರೀತಿ ಮತ ಚಲಾಯಿಸಬೇಕೆಂಬ ಬಗ್ಗೆ ಶಾಸಕರಿಗೆ ಮನದಟ್ಟಾಗು ವಂತೆ 2 ದಿನಗಳ ಕಾಲ ತರಬೇತಿ ಆಯೋಜಿ ಸಲಾಗಿದೆ.

ಈ ಹಿಂದೆ ಈಗಲ್‌ಟನ್ ರೆಸಾರ್ಟ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಸಭೆ ಆಯೋಜಿಸಿದ್ದಾಗ ಮಧ್ಯರಾತ್ರಿ ಬಳ್ಳಾರಿ ಜಿಲ್ಲೆಯ ಶಾಸಕ ಕಂಪ್ಲಿ ಗಣೇಶ್, ವಿಜಯನಗರ ಶಾಸಕ ಆನಂದ್ ಸಿಂಗ್ ಮೇಲೆ ಹಲ್ಲೆ ಮಾಡಿ ವಿವಾದ ಸೃಷ್ಟಿಯಾಗಿತ್ತು. ಈ ಬಾರೀ ಅಂತಹ ಅವಘಡಗಳು ನಡೆಯದಂತೆ ಬೌನ್ಸರ್‌ಗಳು ಹಾಗು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಮಾಜಿ ಸಂಸದ ಡಿ.ಕೆ.ಸುರೇಶ್ ನೇತೃತ್ವದಲ್ಲಿ ಕೆಪಿಸಿಸಿಯ ಪದಾಧಿಕಾರಿಗಳು ರೆಸಾರ್ಟ್ ರಾಜಕೀಯದ ಉಸ್ತುವಾರಿ ನಿರ್ವಹಣೆ ಮಾಡುತ್ತಿದ್ದಾರೆ. ವಿಧಾನ ಪರಿಷತ್ ಚುನಾವಣೆಗೆ ರಹಸ್ಯ ಮತದಾನವಾಗಿರುವುದರಿಂದ ಕಾಂಗ್ರೆಸ್ ನಾಯಕರಿಗೆ ಒಳಗೊಳಗೆ ಆತಂಕ ಇದೆ. ಹೀಗಾಗಿ ಎಲ್ಲಾ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಕಸರತ್ತು ನಡೆಸುತ್ತಿದ್ದಾರೆ.

## ಅಕ್ರಮ ನಲ್ಲಿ ಸಂಪರ್ಕ ಆರೋಪ: ಪರಿಶೀಲನೆ

• ಪ್ರಜೋದಯ ವರದಿ

**ಹಾಸನ:** ಅಕ್ರಮ ನಲ್ಲಿ ಸಂಪರ್ಕ ಪಡೆ ದಿದ್ದಾರೆಂಬ ಆರೋಪದಡಿ ಮಹಾ ನಗರ ಪಾಲಿಕೆ ಅಧಿಕಾರಿಗಳು ಮಂಗಳವಾರ ಆಮ್ ಆದ್ಮಿ ಪಕ್ಷದ ರಾಜ್ಯ ಉಪಾಧ್ಯಕ್ಷ ಅಗಿಲೆ ಯೋಗೀಶ್ ಅವರ ಮನೆಯಲ್ಲಿ ಪರಿಶೀಲನೆ ನಡೆಸಿದರು.

ಎರಡು ನಲ್ಲಿಗೆ ಅನುಮತಿ ಪಡೆದಿರುವ ಯೋಗೀಶ್ ಮೂರು ನಲ್ಲಿ ಬಳಸುತ್ತಿದ್ದಾರೆಂದು ಪಾಲಿಕೆ ಇಂಜಿನೀಯರ್ ಕೆ.ಆರ್.ಕವಿತಾ ಅವರು ಮೇಲಾಧಿಕಾರಿಗಳಿಗೆ ದೂರು ಸಲ್ಲಿಸಿದ್ದರು. ಆ ಹಿನ್ನಲೆಯಲ್ಲಿ ಪರಿಶೀಲನೆ ನಡೆಸಲಾಯಿತು.

ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಆರ್.ಕವಿತಾ ಅವರು, ನಲ್ಲಿ ಕಳ್ಳ ಎಂದು ನಾನು ಅವಮಾನ ಮಾಡಿರುವುದಾಗಿ ಯೋಗೀಶ್ ದೂರು ಕೊಟ್ಟಿದ್ದರು. ಅಕ್ರಮ ನಲ್ಲಿ ಸಂಪರ್ಕದ ಬಗ್ಗೆ ನಾನು ಜನವರಿಯಲ್ಲೇ ದೂರು ನೀಡಿದ್ದೆ. ಅವರು ಫೆಬ್ರವರಿಯಲ್ಲಿ ದೂರು ನೀಡಿದ್ದರು. ಅದನ್ನು ಆಧರಿಸಿ ತನಿಖಾಧಿಕಾರಿಯಾಗಿದ್ದ ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರು ನನಗೆ ನೋಟೀಸ್ ನೀಡಿದ್ದರು. ನೋಟೀಸ್‌ಗೆ ಪ್ರತಿಕ್ರಿಯೆ ನೀಡಿದ ಬಳಿಕ ಯೋಗೀಶ್ ಅವರ ಮನೆಯ ಸ್ಥಳ ಮಹಜರು ಮಾಡುವಂತೆ ಮೇಲಾಧಿಕಾರಿಗಳು ಸೂಚಿಸಿದ್ದಾರೆ.

ಮನೆಗೆ ಸಂಪರ್ಕ ಪಡೆದಿರುವ ನಲ್ಲಿಗಳ ಸಂಪರ್ಕಕ್ಕೆ ಸಂಬಂಧಪಟ್ಟಂತೆ ದಾಖಲೆ ಪರಿಶೀಲನೆ ಮಾಡಬೇಕು. ಅದಕ್ಕಾಗಿ ಬಂದಿದ್ದೇವೆಂದರು. ಅಗಿಲೆ ಯೋಗೀಶ್ ಅವರು ಅಕ್ರಮ ನಲ್ಲಿ ಸಂಪರ್ಕ ಪ್ರಕರಣ ಬೆಳಕಿಗೆ ಬಂದ ನಂತರ ಫೆಬ್ರವರಿ ತಿಂಗಳಲ್ಲಿ ಮಹಾ ನಗರ ಪಾಲಿಕೆಗೆ 2 ನಲ್ಲಿಗಳ ಸಂಪರ್ಕದ ಠೇವಣಿ ಮತ್ತು ಎರಡು ವರ್ಷದ ಕಂದಾಯ ರಶೀದಿ ಪಡೆದಿದ್ದಾರೆ. ಆದರೆ ಮೂರು ನಲ್ಲಿ ಬಳಸುತ್ತಿದ್ದಾರೆಂದು ಆರೋಪಿಸಿದರು.



**ಅಗಿಲೆ ಯೋಗೀಶ್ ಆಕ್ರೋಶ**

ಯಾವುದೇ ನೋಟೀಸ್ ನೀಡದೆ ಏಕಾಏಕಿ ಪರಿಶೀಲನೆಗೆ ಬಂದಿರುವುದನ್ನು ಖಂಡಿಸಿದ ಅಗಿಲೆ ಯೋಗೀಶ್ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅಕ್ರಮವಾಗಿ ನೀರಿನ ಸಂಪರ್ಕ ಪಡೆದಿದ್ದರೆ ಅದನ್ನು ಸಕ್ರಮ ಮಾಡಿಕೊಡಲು ಮಹಾನಗರ ಪಾಲಿಕೆಗೆ ಅವಕಾಶವಿದೆ. ತಪ್ಪು ಮಾಡಿದ್ದರೆ ದಂಡ ವಿಧಿಸಬಹುದು. ಏಕಾಏಕಿ ಮನೆಗೆ ನುಗ್ಗುವುದು ಸರಿಯಲ್ಲ. ನನ್ನನ್ನು ನಲ್ಲಿ ಕಳ್ಳ ಎಂದಿದ್ದರ ಬಗ್ಗೆ ದೂರು ನೀಡಿದರೆ ಅಧಿಕಾರಿಗಳು ನಮ್ಮ ಮನೆಯನ್ನೇ ಪರಿಶೀಲನೆ ನಡೆಸುವುದು ಸರಿಯೇ ಎಂದು ಪ್ರಶ್ನಿಸಿದರು.

## ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ನೀಡಲು ಮನವಿ

• ಪ್ರಜೋದಯ ವರದಿ

**ಬೇಲೂರು:** ಹಾಸನ ಜಿಲ್ಲೆಯ ಅಭಿವೃದ್ಧಿ ಹಾಗೂ ಕಾಂಗ್ರೆಸ್ ಪಕ್ಷದ ಸಂಘಟನೆಗೆ ಹೆಚ್ಚಿನ ಬಲ ನೀಡುವ ನಿಟ್ಟಿನಲ್ಲಿ ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಬೇಲೂರು ತಾಲ್ಲೂಕು ಕಾಂಗ್ರೆಸ್ ಮುಖಂಡರು ರಾಜ್ಯ ಕಾಂಗ್ರೆಸ್ ನಾಯಕರಿಗೆ ಮನವಿ ಮಾಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ವಿರೂಪಾಕ್ಷ, ಜಿಲ್ಲೆಯ ಸಮಸ್ಯೆಗಳು ಮತ್ತು ಅಗತ್ಯತೆಗಳನ್ನು ಅರಿತಿರುವ ಸ್ಥಳೀಯ ನಾಯಕರಿಗೆ ಹೆಚ್ಚಿನ ಜವಾಬ್ದಾರಿ ನೀಡಿದರೆ ಅಭಿವೃದ್ಧಿ ಕಾರ್ಯಗಳಿಗೆ ವೇಗ ಸಿಗಲಿದೆ. ಬೇರೆ ಜಿಲ್ಲೆಗಳ ಸಚಿವರನ್ನು ಜಿಲ್ಲಾ ಉಸ್ತುವಾರಿಗಳಾಗಿ ನೇಮಕ ಮಾಡುವುದಕ್ಕಿಂತ ಜಿಲ್ಲೆಯವರೇ ಉಸ್ತುವಾರಿ ವಹಿಸಿದರೆ ಜನರ ಸಮಸ್ಯೆ ಗಳಿಗೆ ತ್ವರಿತ ಸ್ಪಂದನೆ ದೊರೆಯಲಿದೆ. ಈ ಹಿನ್ನಲೆಯಲ್ಲಿ ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ಹಾಗು ಜಿಲ್ಲಾ ಉಸ್ತುವಾರಿ ಜವಾಬ್ದಾರಿ ನೀಡಬೇಕೆಂದು ಒತ್ತಾಯಿಸಿದರು.

ಶಿವಲಿಂಗೇಗೌಡರು ನಿಗಮ ಮಂಡಳಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದು, ಲೋಕಸಭಾ ಚುನಾವಣೆಯಲ್ಲಿ ಜಿಲ್ಲೆಯಾದ್ಯಂತ ಸಕ್ರಿಯವಾಗಿ ಕಾರ್ಯನಿರ್ವಹಿಸಿ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಅವರ ಗೆಲುವಿಗೆ ಕೊಡುಗೆ ನೀಡಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡಿದರೆ ಜಿಲ್ಲೆಯಲ್ಲಿ ಪಕ್ಷ ಸಂಘಟನೆ ಮತ್ತಷ್ಟು ಬಲಗೊಳ್ಳಲಿದೆ ಎಂದು ಹೇಳಿದರು.

ಕಿಸಾನ್ ಘಟಕದ ಜಿಲ್ಲಾ ಉಪಾಧ್ಯಕ್ಷ ಧನಪಾಲ್ ಮಾತನಾಡಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷರು ಹಾಗೂ ಪಕ್ಷದ ಹಿರಿಯ ನಾಯಕರಿಗೆ ಮನವಿ ಸಲ್ಲಿಸಲಾಗಿದೆ ಎಂದರು.




ಜೂನ್ 18ರ ನಂತರ ಬೇಲೂರು ಕ್ಷೇತ್ರದ ಹಿರಿಯ ಕಾಂಗ್ರೆಸ್ ಮುಖಂಡರ ನಿಯೋಗ ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿ ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ನೀಡುವಂತೆ ಮನವಿ ಮಾಡುವುದಾಗಿ ತಿಳಿಸಿದರು.

ಮುಂಬರುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ 2028ರ ವಿಧಾನಸಭಾ ಚುನಾವಣೆಗಳ ದೃಷ್ಟಿಯಿಂದ ಜಿಲ್ಲೆಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ಅಗತ್ಯವಿದೆ. 2ನೇ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ಶಿವಲಿಂಗೇಗೌಡರಿಗೆ ಅವಕಾಶ ನೀಡುವ ಮೂಲಕ ಜಿಲ್ಲೆಗೆ ನ್ಯಾಯ ಒದಗಿಸಬೇಕೆಂದು ಕಾಂಗ್ರೆಸ್ ಮುಖಂಡರು ಸರ್ಕಾರದ ಗಮನ ಸೆಳೆದರು.

ಕೆಪಿಸಿಸಿ ಸದಸ್ಯ ರಮೇಶ್, ಅಸ್ಲಾಂ ಹಾಗೂ ಕಾಂಗ್ರೆಸ್ ಯುವ ಘಟಕದ ತಾಲ್ಲೂಕು ಉಪಾಧ್ಯಕ್ಷ ರಾಕೇಶ್ ಉಪಸ್ಥಿತರಿದ್ದರು.

## ಯುವಕರು ದಾರಿ ತಪ್ಪಿದರೆ ಸಮಾಜಕ್ಕೆ ನಷ್ಟ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಯುವಕರು ದಾರಿ ತಪ್ಪಿದರೆ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತದೆಂದು ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಭಾರ ಪ್ರಾಂಶುಪಾಲ ಚಂದ್ರಶೇಖರ್ ಅವರು ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ಮಂಗಳವಾರ ನಡೆದ ವಿಶ್ವ ತಂಬಾಕು ವಿರೋಧಿ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಯುವಕರು ದಾರಿ ತಪ್ಪಬಾರದು. ಸಮಾಜದಲ್ಲಿ ಕೆಲ ದುಷ್ಟ ಶಕ್ತಿಗಳು ಯುವಕರನ್ನು ಅಡ್ಡದಾರಿಗೆ ಎಳೆಯುತ್ತವೆ. ಈ ಬಗ್ಗೆ ಜಾಗೃತಿ ಮೂಡಿಸಬೇಕು. ತಂದೆ-ತಾಯಿ ಮಕ್ಕಳ ಭವಿಷ್ಯದ ಬಗ್ಗೆ ಕನಸು ಹೊಂದಿರುತ್ತಾರೆ. ಅವರ ಆಸೆಗೆ ತಣ್ಣೀರು ಎರಚಬೇಡಿ, ವಿದ್ಯಾರ್ಥಿಗಳು ಆಕರ್ಷಣೆಗೆ, ಸ್ನೇಹಿತರ ಬಲವಂತಕ್ಕೆ ದುಶ್ಚಟಗಳಿಗೆ ಬಲಿಯಾಗಿ ಆರೋಗ್ಯ, ನೆಮ್ಮದಿ ಹಾಗು ಭವಿಷ್ಯವನ್ನು ಹಾಳು ಮಾಡಿಕೊಳ್ಳಬಾರದೆಂದರು.

ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಸಂಚಾಲಕ ಎ.ಎಂ.ಜಯರಾಮ್ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಅನೇಕ ವಿದ್ಯಾರ್ಥಿಗಳು ಸಹವಾಸ ದೋಷದಿಂದ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಸುಂದರ ಭವಿಷ್ಯದ ಕನಸು ನುಚ್ಚು ನೂರಾಗಿದೆ. ಯುವ ಶಕ್ತಿ ಸದ್ಬಳಕೆಯಾಗಬೇಕು, ಗ್ರಾಮೀಣ ಭಾಗದಲ್ಲಿ ಹೆಣ್ಣು ಮಕ್ಕಳು ಈ ದುಶ್ಚಟಕ್ಕೆ ಬಲಿಯಾಗುತ್ತಿರುವುದು ಆತಂಕಕಾರಿಯಾಗಿದೆ ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಯೋಜನಾಧಿಕಾರಿ ಚೇತನ್ ಅವರು ಮಾತನಾಡಿ, ಧರ್ಮಸ್ಥಳದ ಡಾ.ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಆರ್ಥಿಕ, ಮದ್ಯವರ್ಜನ ಶಿಬಿರ ಹಾಗು ಜನಪರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ. ಜೂನ್ 30ರಂದು ರಾಜ್ಯಾದ್ಯಂತ 1000 ಶಾಲಾ-ಕಾಲೇಜುಗಳಲ್ಲಿ ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ ನಡೆಸಲು ಯೋಜನೆ ಹಾಕಿಕೊಳ್ಳಲಾಗಿದೆ ಎಂದರು.

ಉಪನ್ಯಾಸಕರಾದ ರಂಗಸ್ವಾಮಿ, ದೀಪಕ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಸಂಯೋಜಕ ರಮೇಶ್, ಸೇವಾ ಪ್ರತಿನಿಧಿಗಳಾದ ಆಶಾ, ವಸಂತ ಮುಂತಾದವರಿದ್ದರು.

### ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿ ರಚನೆ : ರಾಜ್ಯಾಧ್ಯಕ್ಷ ರಾಜ್ ಪ್ರಶಾಂತ್

# ಪ್ರಜಾಪ್ರಭುತ್ವ ಪಕ್ಷ ಕರ್ನಾಟಕ ಸ್ಥಾಪನೆ

• ಪ್ರಜೋದಯ ವರದಿ

**ಹಾಸನ:** ರಾಜ್ಯದಲ್ಲಿ ಬದಲಾವಣೆ ತರುವ ಆಶಯ ಹೊತ್ತು ಪ್ರಜಾಪ್ರಭುತ್ವ ಪಕ್ಷ ಕರ್ನಾಟಕ (ಪಿಪಿಕೆ) ಎಂಬ ಹೊಸ ಪ್ರಾದೇಶಿಕ ರಾಜಕೀಯ ಪಕ್ಷ ಸ್ಥಾಪಿಸಲಾಗಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ರಾಜ್ ಪ್ರಶಾಂತ್ ಅವರು ತಿಳಿಸಿದರು.




ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷದ ಚುನಾವಣಾ ಗುರುತಾಗಿ ಪೆನ್ ಆಯ್ಕೆ ಮಾಡಲಾಗಿದ್ದು, ಜ್ಞಾನ, ಕಾನೂನು ಹಾಗು ಅಭಿವೃದ್ಧಿಯ ಸಂಕೇತವಾದ ಪೆನ್ ಮೂಲಕ ರಾಜ್ಯದಲ್ಲಿ ಹೊಸ ರಾಜಕೀಯ ಹಾಗು ಸಾಮಾಜಿಕ ಪರಿವರ್ತನೆ ತರಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಕರ್ನಾಟಕದ ಸಮಗ್ರ ಅಭಿವೃದ್ಧಿ, ಜನಸೇವೆ ಹಾಗೂ ಭ್ರಷ್ಟಾಚಾರ ನಿರ್ಮೂಲನೆ ಗುರಿ ಹೊಂದಲಾಗಿದೆ. ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಎಂಬ ಧ್ಯೇಯ ವಾಕ್ಯದೊಂದಿಗೆ ಪಕ್ಷ ಕಟ್ಟಲಾಗುತ್ತಿದೆ. ಇಲ್ಲಿ ಪ್ರಜೆಗಳೇ ಸಾರ್ವಭೌಮರು ಹಾಗು ಪಕ್ಷದ ನಾಯಕರು ಜನರ ಸೇವಕರಾಗಿರುತ್ತಾರೆ. ರಾಜ್ಯದಲ್ಲಿ ಭ್ರಷ್ಟಾಚಾರ ಮುಕ್ತ ಆಡಳಿತ ವ್ಯವಸ್ಥೆ ನಿರ್ಮಿಸುವುದು, ಪಾರದರ್ಶಕ ಆಡಳಿತ ಜಾರಿಗೆ ತರುವುದು, ಉದ್ಯೋಗ ಸೃಷ್ಟಿ ಮೂಲಕ ನಿರುದ್ಯೋಗ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವುದು ಪ್ರಮುಖ ಗುರಿಗಳಾಗಿವೆ ಎಂದರು.

ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಮಾದರಿಯಲ್ಲೇ ಉಚಿತ ಹಾಗೂ ಗುಣಮಟ್ಟದ ಶಿಕ್ಷಣ ವ್ಯವಸ್ಥೆ ಜಾರಿಗೊಳಿಸುವುದರ ಜೊತೆಗೆ ಸುಸಜ್ಜಿತ ಆರೋಗ್ಯ ಸೇವೆ, ಉಚಿತ ಔಷಧಿ ಹಾಗೂ ತಜ್ಞ ವೈದ್ಯರ ಸೇವೆ ಒದಗಿಸುವ ಉದ್ದೇಶವನ್ನು ಪಕ್ಷ ಹೊಂದಿದೆ. ಜಾತಿ, ಧರ್ಮ, ಭಾಷೆ, ಲಿಂಗ ಹಾಗೂ ಆರ್ಥಿಕ ಸ್ಥಿತಿಯ ಭೇದ ಭಾವವಿಲ್ಲದೆ ಎಲ್ಲರಿಗೂ ಸಮಾನಹಕ್ಕು, ಅವಕಾಶ ಹಾಗೂ ಗೌರವ ದೊರೆಯುವ ಸಮಾಜ ನಿರ್ಮಾಣಕ್ಕೆ ಪಕ್ಷ ಬದ್ಧವಾಗಿದೆ ಎಂದು ಹೇಳಿದರು.

ಪಕ್ಷದ ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿ ರಚನೆ ಹಾಗು ವಿವಿಧ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗಿದೆ. ಜಿಲ್ಲಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಸಹ ಕಾರ್ಯದರ್ಶಿ, ಉಪಾಧ್ಯಕ್ಷರು, ಸಂಚಾಲಕರು ಹಾಗು ಕಾರ್ಯಕಾರಿ ಸಮಿತಿ ಸದಸ್ಯರ ಹುದ್ದೆಗಳಿಗೆ ಸೇವಾ ಮನೋಭಾವ ಹೊಂದಿರುವ ಅಭ್ಯರ್ಥಿ ಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪಕ್ಷ ದಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಹೊಂದಿರುವವರು 90199-51837 ಸಂಖ್ಯೆ ಸಂಪರ್ಕಿಸಬಹುದಾಗಿದೆ ಎಂದರು.

ಪಕ್ಷದ ಪ್ರಧಾನ ಕಾರ್ಯದರ್ಶಿ ಶಾಮ್, ಉಪಾಧ್ಯಕ್ಷ ಶಂಕರ್, ಖಜಾಂಚಿ ಅಭಿ, ಸಂಚಾಲಕ ಚಂದ್ರು ಇದ್ದರು.

## ರೈಲ್ವೆ ಯೋಜನೆ ಭೂಸಂತ್ರಸ್ತರಿಗೆ ವೈಜ್ಞಾನಿಕ ಪರಿಹಾರ ನೀಡಿ



• ಪ್ರಜೋದಯ ವರದಿ

**ಹಾಸನ:** ಆಲೂರು-ಬೇಲೂರು ರೈಲು ಮಾರ್ಗಕ್ಕಾಗಿ ಭೂಸ್ವಾಧೀನಕ್ಕೆ ಮುಂದಾಗಿರುವ ಸರ್ಕಾರ ರೈತರ ವಿಶ್ವಾಸ ಪಡೆಯದೆ ಹಾಗು ವೈಜ್ಞಾನಿಕ ಪರಿಹಾರ ನೀಡದೆ ಮೋಸ ಮಾಡುತ್ತಿದೆ ಎಂದು ಆರೋಪಿಸಿ ಮಂಗಳವಾರ ರಾಷ್ಟ್ರೀಯ ರೈತ ಸಂಘದಿಂದ (ಆದಿಯೋಗಿ ಸದಾಶಿವಯ್ಯ ಅರಕೇರಿಮಠ ಸ್ವಾಮಿ ಸ್ಥಾಪಿತ) ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಜಮೀನು ಗುರುತಿಸುವಿಕೆ, ವಶಪಡಿಸಿಕೊಳ್ಳಲಾರದ ಭೂಮಿ ಗುರುತಿಸುವಿಕೆ, ಸಮೀಕ್ಷೆ, ಬೆಲೆ ನಿಗದಿ ವಿಚಾರದಲ್ಲಿ ಸಾಕಷ್ಟು ಲೋಪದೋಷಗಳಾಗಿವೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಅನಕ್ಷರಸ್ಥ ರೈತರು ಪೂರ್ವಾಪರ ಯೋಚಿಸದೆ ಕಡಿಮೆ ಬೆಲೆಗೆ ಭೂಮಿ ನೀಡಿದ್ದಾರೆ. ಆದ್ದರಿಂದ ಸರ್ಕಾರ ಈ ವಿಚಾರವನ್ನು ಆದ್ಯತೆಯಾಗಿ ಪರಿಗಣಿಸಿ ಪ್ರಸ್ತುತ ಮಾರುಕಟ್ಟೆ ಬೆಲೆಯಂತೆ ನೀಡಬೇಕೆಂದರು.

ಸ್ವಾಧೀನಪಡಿಸಿಕೊಳ್ಳಲಿರುವ ಜಮೀನಿನಲ್ಲಿ ಬೆಳೆ, ಮನೆ, ಕೊಳವೆ ಬಾವಿ ಇದ್ದು ಅದರ ಸರ್ವೆ ಮಾಡುತ್ತಿಲ್ಲ. ಲಕ್ಷಾಂತರ ರೂಪಾಯಿ ಸಾಲ ಸೋಲ ಮಾಡಿ ರೈತರು ಕೃಷಿಗಾಗಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಈಗ ಅವುಗಳನ್ನು ಪರಿಗಣಿಸದಿದ್ದರೆ ಪರಿಹಾರದಲ್ಲಿ ಅನ್ಯಾಯವಾಗುತ್ತದೆ. ಆಲೂರು-ಬೇಲೂರು ಹೊಸ ಬ್ರಾಡ್‌ಗೇಜ್ ರೈಲ್ವೆ ಯೋಜನೆಗೆ ಸಂಬಂಧಿಸಿದಂತೆ ಎಲ್ಲಾ ಭಾಗಿದಾರ ಇಲಾಖೆಗಳ ಮತ್ತು ಸಕ್ಷಮ ಅಧಿಕಾರಿಗಳ ಸಭೆಯನ್ನು ಶೀಘ್ರವಾಗಿ ನಡೆಸಬೇಕು. ಕರ್ತವ್ಯ ಲೋಪ ಎಸಗುವ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಆದಿಯೋಗಿ ಸದಾಶಿವಯ್ಯ, ಅರಕೇರಿ ಮಠ,ಪದಾಧಿಕಾರಿಗಳಾದ ಯೋಗೇಶ್, ವೆಂಕಟೇಶ್, ಸೋಮ ಶೇಖರಯ್ಯ, ಗೋಪಾಲ್, ನಂದೀಶ್ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019